ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 4 | ಜನವರಿ 25, 1987 | ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಸಾರ್ವಜನಿಕರಂಗ—ಯಶಸ್ವಿ ದೇಶವ್ಯಾಪಿ ಮುಷ್ಕರ

ಎಲ್ಲೆಡೆ ದೇಶವನ್ನು ನಡೆಸುವ ಕೈಗಳು ಸ್ತಬ್ಧ

ಸರ್ಕಾರಿ ಸಂಸ್ಥೆಗಳ ಖಾಸಗೀಕರಣವನ್ನು ನಿಲ್ಲಿಸುವ ಬೇಡಿಕೆಯೊಂದಿಗೆ ಹದಿನಾಲ್ಕು ಅಂಶಗಳ ಬೇಡಿಕೆಯನ್ನು ಮುಂದಿಟ್ಟು ಇಪ್ಪತ್ತೊಂದು ಲಕ್ಷಕ್ಕೂ ಹೆಚ್ಚು ಮಂದಿ ನೌಕರರು ಸಾಂಕೇತಿಕ ಮುಷ್ಕರವನ್ನು ಆಚರಿಸಿದ್ದರ ಪರಿಣಾಮವಾಗಿ ಇಂದು ರಾಷ್ಟ್ರೀಕೃತ ಬ್ಯಾಂಕುಗಳ ಮತ್ತು ಇಂಡಿಯನ್ ಏರ್‌ಲೈನ್ಸ್ ಸಹಿತ ಎಲ್ಲ ಸಾರ್ವಜನಿಕ ರಂಗದ ಸಂಸ್ಥೆಗಳಲ್ಲಿ ಕೆಲಸ ಸಂಪೂರ್ಣ ಸ್ತಬ್ಧವಾಯಿತು.

ತಂತ್ರಜ್ಞಾನವನ್ನು ಮತ್ತು ಸಾಮಗ್ರಿಗಳನ್ನು ಆಮದು ಮಾಡುವುದನ್ನು ನಿಲ್ಲಿಸಬೇಕು ಹಾಗೂ ಅಧುನೀಕರಣ ಮತ್ತು ಗಣಕ ಯಾಂತ್ರೀಕರಣಕ್ಕೆ ಕಾರ್ಮಿಕ ಸಂಘಗಳ ಪೂರ್ವಾನುಮತಿ ಪಡೆದಿರಬೇಕು ಎಂಬುದಾಗಿ ಕಳೆದ ವರ್ಷ ಅಕ್ಟೋಬರಿನಲ್ಲಿ ನಡೆದ ಸಾರ್ವಜನಿಕ ರಂಗದ ನೌಕರರ ಸಂಘಗಳ ಅಖಿಲ ಭಾರತ ಸಮ್ಮೇಳನದಲ್ಲಿ ಅಂತಿಮಗೊಳಿಸಲಾದ ಬೇಡಿಕೆಗಳ ಪಟ್ಟಿಯಲ್ಲಿ ಒತ್ತಾಯಿಸಲಾಗಿತ್ತು.

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿಯು ಕರೆ ನೀಡಿದ ಒಂದು ದಿನದ ಮುಷ್ಕರಕ್ಕೆ ಸಿ.ಐ.ಟಿ.ಯು., ಏಟಕ್, ಬಿ. ಎಂ. ಎಸ್. ಮತ್ತು ಎಚ್. ಎಂ. ಎಸ್. ಬೆಂಬಲ ನೀಡಿದ್ದವು. ಆದರೆ ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ [ಇಂಟಕ್]ಆದರಿಂದ ದೂರ ನಿಂತಿದೆ.

ಬ್ಯಾಂಕಿಂಗ್ ಮತ್ತು ವಿಮಾನ ಸಾರಿಗೆಯಂತಹ ಸಾರ್ವಜನಿಕ ಉಪಯೋಗದ ಸೇವೆಗಳ ಮೇಲೆ ಮುಷ್ಕರವು ತೀವ್ರ ಪರಿಣಾಮ ಬೀರಿತು. ಬ್ಯಾಂಕ್ ನೌಕರರ ಒಕ್ಕೂಟ ಮತ್ತು ಅಖಿಲ ಭಾರತ ರಿಸರ್ವ್ ಬ್ಯಾಂಕ್ ನೌಕರರ ಸಂಘವು ನೀಡಿದ ಕರೆಯಂತೆ ಹೆಚ್ಚಿನ ರಾಷ್ಟ್ರೀಕೃತ ಬ್ಯಾಂಕ್‌ಸಿಬ್ಬಂದಿಗಳು ಕೆಲಸಕ್ಕೆ ಹಾಜರಾಗಲಿಲ್ಲ.

ಮುಂಬೈ : ಪೂರ್ಣಯಶಸ್ವಿ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯದ ಕ್ಲಿಯರಿಂಗ್ ಹೌಸ್‌ಗಳಲ್ಲಿ ಕೆಲಸ ನಿಂತುಹೋಯಿತು. ಅಲ್ಲಿ ಮುಷ್ಕರವು ಸಂಪೂರ್ಣವಾಗಿತ್ತೆಂದು ರಿಸರ್ವ್ ಬ್ಯಾಂಕ್ ನೌಕರರ ಸಂಘವು ಹೇಳಿದೆ. ಆದರೆ ಕೆಲವೇ ಮಂದಿ ಸಿಬ್ಬಂದಿಗಳು ಮುಖ್ಯವಾಗಿ ಅಧಿಕಾರಿಗಳು ಕೆಲಸ ಮಾಡಿದರೆಂದು ಮುಂಬಯಿಯಿಂದ ವರದಿಯಾಗಿದೆ.

ಏರ್ ಕಾರ್ಪೊರೇಶನ್ ಎಂಪ್ಲೊಯೀಸ್ ಯೂನಿಯನ್‌ಗೆ ನಿಷ್ಠರಾಗಿರುವ ಇಂಡಿಯನ್ ಏರ್‌ಲೈನ್ಸ್ ಮತ್ತು ಇಂಡಿಯಾ ನೌಕರರು ರಾತ್ರಿಯ ಪಾಳಿಯಿಂದಲೇ ಮುಷ್ಕರ ಆರಂಭಿಸಿದ್ದರು ಮತ್ತು ಶಿಪ್ಪಿಂಗ್ ಕಾರ್ಪೊರೇಶನ್ ಹಾಗೂ ಮೊಗಲ್ ಲೈನ್ಸ್ ನೌಕರರು ಇಂದು ಬೆಳಿಗ್ಗಿನಿಂದ ಗೈರು ಹಾಜರಿದ್ದರು. [8ನೇ ಪುಟ ನೋಡಿ]

ದೇಶಾದ್ಯಂತ ರ್‍ಯಾಲಿಗಳೂ ಧರಣಿ ಮುಷ್ಕರಗಳೂ ನಡೆದವು. ರಾಜಧಾನಿಯಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕಾರ್ಮಿಕ ಖಾತೆಯೆದುರು ಧರಣಿ ಹೂಡಿ ಪ್ರಧಾನ ಮಂತ್ರಿ ಶ್ರೀ ರಾಜೀವ್‌ಗಾಂಧಿ ಮತ್ತು ಕಾರ್ಮಿಕ ಸಚಿವ ಶ್ರೀ ಪಿ. ಎ. ಸಂಗ್ಮಾ ಅವರಿಗೆ ಮನವಿಯೊಪ್ಪಿಸಿತು.

ಬೆಂಗಳೂರಿನಲ್ಲಿ ಯಶಸ್ವಿ ಮುಷ್ಕರ, ರ್‍ಯಾಲಿ

ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ ಹೊರತುಪಡಿಸಿ ನಗರದ ಇನ್ನೆಲ್ಲ ಸಾರ್ವಜನಿಕ ಉದ್ಯಮಗಳಲ್ಲಿನ ಇಂದಿನ ಮುಷ್ಕರ ಯಶಸ್ವಿಯಾಗಿ ನಡೆಯಿತು.

ರಾಷ್ಟ್ರೀಕೃತ ಬ್ಯಾಂಕುಗಳ ಪೈಕಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹೊರತುಪಡಿಸಿ ಬೇರೆಲ್ಲ ಬ್ಯಾಂಕ್‌ಗಳಲ್ಲಿ ಮುಷ್ಕರ ಪೂರ್ಣ ಪ್ರಮಾಣದಲ್ಲಿ ನಡೆಯಿತು ಎಂದು ವರದಿ ಆಗಿದೆ.

ಕೇಂದ್ರ ಸರ್ಕಾರದ ಸಾರ್ವಜನಿಕೋದ್ಯಮ ವಿರೋಧಿ ನೀತಿಯನ್ನು ಪ್ರತಿಭಟಿಸಲು ಇಂಟಕ್ ಹೊರತಾಗಿ ಉಳಿದೆಲ್ಲ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ರೂಪಿಸಿದ ಸಾರ್ವಜನಿಕ ಉದ್ಯಮ ರಕ್ಷಣಾ ಸಮಿತಿ ನೀಡಿದ ಕರೆಯ ಮೇರೆಗೆ ಇಂದಿನ ಮುಷ್ಕರ ನಡೆಯಿತು.

ಬಿ.ಇ.ಎಲ್., ಐ.ಟಿ.ಐ. ಬಿ.ಇ., ಎಂ.ಎಲ್. ಎಚ್. ಎ. ಎಲ್. ಗಳಲ್ಲಿ ಹಾಗೂ ವಿವಿಧ ಬ್ಯಾಂಕ್ ಶಾಖೆಗಳಲ್ಲಿ ಮುಷ್ಕರ ನಿರಾತಂಕವಾಗಿ ನಡೆಯಿತು.

ಬಿ.ಇ.ಎಲ್. ಐ.ಟಿ.ಐ. ಹಾಗೂ ಎಚ್.ಎ.ಎಲ್. ಬಸ್ಸುಗಳು ಇಂದು ಗ್ಯಾರೇಜನ್ನೇ ಬಿಡಲಿಲ್ಲ.

ಬಿ.ಇ.ಎಲ್. ಕಾರ್ಖಾನೆ ಎದುರು ಬಾವುಟಗಳನ್ನು ಹಿಡಿದು ಸಜ್ಜಾಗಿದ್ದ ಮುಷ್ಕರ ನಿರತ ನೌಕರರು ಆವರಣದೊಳಗೆ ಯಾರೂ ಹೋಗದಂತೆ ತಡೆಯುವಲ್ಲಿ ಯಶಸ್ವಿಯೂ ಆದರು.

ಅಗತ್ಯ ಸೇವೆಯ ನೌಕರರು ಎಂದು ಪರಿಗಣಿಸಲಾದ ಕೆಲವರು ಕಾರ್ಖಾನೆಯೊಳಗೆ ತೆರಳಲು ಯಾರೂ ಎಲ್ಲಿಯೂ ತೊಂದರೆ ಮಾಡಲಿಲ್ಲ.

ಐ.ಟಿ.ಐ.ಯಲ್ಲಂತೂ ಯಾರನ್ನೂ ಯಾರೂ ತಡೆಯಲೂ ಇಲ್ಲ ಒಳಗೆ ಹೋಗಲೇಬೇಕೆಂಬ ಹಟವನ್ನೂ ಯಾರೂ ಮಾಡಲಿಲ್ಲ. ಈ ಕಾರ್ಖಾನೆಯಲ್ಲಿ ಹಾಜರಾದ ಸುಮಾರು ಎರಡು ಸಾವಿರ ಅಧಿಕಾರಿಗಳು ಕೂಡಾ ಒಂದೆರಡು ಗಂಟೆ ಬಳಿಕ ನಿರ್ಗಮಿಸಿದರು.

ರ್‍ಯಾಲಿ

ಸಂಜೆ 5-30ಕ್ಕೆ ಬೆಂಗಳೂರಿನ ಚಿಕ್ಕಲಾಲ್‌ಬಾಗಿನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ರಾಜ್ಯ ಅಧ್ಯಕ್ಷ ಕಾಂ|| ಸೂರ್ಯನಾರಾಯಣರಾವ್, ಏಟಕ್‌ನ ಎಚ್. ಎಂ. ಎಸ್., ಎಚ್. ಎಂ. ಕೆ. ಪಿ. ಯ ನಾಯಕರು ಬ್ಯಾಂಕ್ ಎಲ್. ಐ. ಸಿ. ಸಿಬ್ಬಂದಿ ಸಂಘಗಳ ಪ್ರತಿನಿಧಿಗಳು ಮಾತನಾಡಿದರು.

ಮಂಡಲ್ ಪಂಚಾಯತ್ ಚುನಾವಣೆಗಳು

ಒಂದು ವಿಶ್ಲೇಷಣೆ

– ಪಿ. ರಾಮಚಂದ್ರರಾವ್

ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕೆಂಬ ಪ್ರಜಾಸತ್ತಾತ್ಮಕ ಅಭಿಪ್ರಾಯವನ್ನು ಜನತಾ ಪಕ್ಷದ ಸರಕಾರವು ತಿರಸ್ಕರಿಸಿ, ಮೊದಲು ಜಿಲ್ಲಾ ಪರಿಷತ್ ಚುನಾವಣೆಗಳನ್ನು, ಆಮೇಲೆ ಮಂಡಲ್ ಪಂಚಾಯತ್ ಚುನಾವಣೆಗಳನ್ನು ನಡೆಸಿದ್ದರ ಉದ್ದೇಶ ಫಲಿಸಿದೆ ಎಂಬುದನ್ನು ಮಂಡಲ್‌ಪಂಚಾಯತ್ ಚುನಾವಣೆಗಳ ಫಲಿತಾಂಶಗಳು ತೋರಿಸಿವೆ. ರಾಜ್ಯದಲ್ಲಿ 16ರಲ್ಲಿ 17 ಜಿಲ್ಲಾ ಪರಿಷತ್‌ಗಳಲ್ಲಿ ಬಹುಮತ ಪಡೆದ ಜನತಾಪಕ್ಷವು ಕೆಲವೇ ದಿನದಲ್ಲಿ ನಡೆಯಲ್ಲಿದ್ದ, ನಡೆದ "ಮಂಡಲ ಪಂಚಾಯತ್‌ಗಳ ಚುನಾವಣೆಯ ಮೇಲೆ ಪ್ರಭಾವ ಬೀರಿದೆ, ಎಂಬುದರಲ್ಲಿ ಏನೂ ಸಂಶಯವಿಲ್ಲ"

ಎಲ್ಲೆಡೆಗಳಿಂದ ಬಂದ ವರದಿಗಳ ಪ್ರಕಾರ ಹಾಗು ಜನವರಿ 20 ರಂದು ನಡೆದ ಗಲಭೆಗಳ ಆಧಾರದಲ್ಲಿ "ಜನತಾ ಪಕ್ಷವು—ಹಾಗೂ ಕಾಂಗ್ರೆ ಪಕ್ಷವು– ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮುಕ್ತ ವಾತಾವರಣದಲ್ಲಿ ಜನತೆ ಮತವೀಯದಂತೆ ಮಾಡಿದೆ ಎಂಬುದು ಎದ್ದು ಕಾಣುತ್ತಿದೆ.

ಮುಕ್ತ ವಾತಾವರಣವನ್ನು ಕೆಡಿಸುವ ಕೆಲಸವನ್ನು ಜನತಾ ಮತ್ತು ಕಾಂಗ್ರೆಸ್ ಪಕ್ಷಗಳ "ಭೂಮಾಲಕ ಪ್ರಭೃತಿಗಳು" ತಮ್ಮ ಗೂಂಡಾ ಪಡೆಗಳ ಸಹಾಯದಿಂದ ಮಂಡಲ ಪಂಚಾಯತ್‌ಗಳಿಗೆಅಭ್ಯರ್ಥಿಗಳ ನಾಮಕರಣದ ಕ್ಷಣದಿಂದ ಯೋಜನಾಬದ್ಧವಾಗಿ, ಯಾವುದೇ ಪಕ್ಷದ ಅಂಜಿಕೆಯಿಲ್ಲದೆ, ಮಾಡುತ್ತಾ ಬಂದಿದೆ. ಅಭ್ಯರ್ಥಿಗಳಾಗಲು ಮುಂದೆ ಬಂದ

[8ನೇ ಪುಟ ನೋಡಿ]

ತ್ರಿಪುರ : ಟಿ. ಎನ್. ವಿ. ನಿಷೇಧ

ತ್ರಿಪುರದಲ್ಲಿ ಕಾಂಗ್ರೆ ಟಿ. ಯು. ಜೆ. ಎಸ್, ಮೈತ್ರಿ, ಇದರಿಂದ ಟಿ. ಯು. ಜೆ. ಎಸ್. ನ ಸೈನಿಕ ವಿಭಾಗದಂತೆ ವರ್ತಿಸುತ್ತಿರುವ, ವಿದೇಶಿ ಹಣ, ತರಬೇತಿಗಳಿಂದ ಕೊಬ್ಬಿ ಕೊಲೆ ಹತ್ಯಾಕಾಂಡಗಳ ರಾಜಕೀಯ ನಡೆಸಿರುವ ಟಿ. ಎನ್.ವಿ. ಗೆ ದೊರೆತ ಪ್ರೋತ್ಸಾಹ ಪ್ರಚೋದನೆ ಈಗಾಗಲೇ ಎಲ್ಲರಿಗೂ ತಿಳಿದ ವಿಷಯ.

ದೇಶದ ಸಮಗ್ರತೆಯನ್ನು ರಕ್ಷಿಸುವ ವಿಷಯದಲ್ಲಿ ಸ್ವಾರ್ಥಿ, ಕೊಳಕು ರಾಜಕೀಯಕ್ಕೆಳಸದೆ ರಾಜ್ಯಸರಕಾರ ಹಾಗೂ ಕೇಂದ್ರ ಸರಕಾರ ಎರಡೂ ಸಮಾನ ದೃಷ್ಟಿಯನ್ನು ತಳೆದು ಚಿದ್ರಕಾರಿ, ಗಳನ್ನು ಹೊಡೆದೋಡಿಸೋಣ ಎಂಬ ತ್ರಿಪುರಾ ಎಡರಂಗ ಸರ್ಕಾರ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿನಂತಿಯನ್ನು ಕಡೆಗಣಿಸಿ ಎಡರಂಗ ಸರ್ಕಾರವನ್ನು ಸೋಲಿಸಿ ತಾನು ಅಧಿಕಾರಕ್ಕೆ ಬರಬೇಕೆಂಬ ಹಂಬಲದಿಂದ ರಾಷ್ಟ್ರ ಹಿತವನ್ನು ಬಲಿಗೊಟ್ಟ ಕಾಂಗ್ರೆ ಪಕ್ಷ ಹಾಗು ಕೇಂದ್ರ ಸರ್ಕಾರ ಇದೀಗ ಜನಾಭಿಪ್ರಾಯದ ಒತ್ತಾಯಕ್ಕೆ ಮಣಿಯಬೇಕಾಗಿ ಬಂದಿದೆ.

ಕಾಂ. ನೃಪೇನ್ ಚಕ್ರವರ್ತಿಯವರೊಡನೆ ಕೇಂದ್ರ ಸರಕಾರ ನಡೆಸಿದ ಮಾತುಕತೆಯಲ್ಲಿ ತ್ರಿಪುರಾಗೆ ಹೆಚ್ಚು ಅಸ್ಸಾಂ ರೈಫಲ್ ದಳವನ್ನು ನೀಡಲು ಒಪ್ಪಿದೆ.

ಭಯೋತ್ಪಾದಕರ ತಂಡವಾದ ಟಿ. ಎನ್. ವಿಯನ್ನು ನಿಷೇಧಿಸಿದೆ. ಇದರಿಂದ ಇವರನ್ನು, ಇವರಿಗೆ ಬೆಂಬಲ ನೀಡುತ್ತಿರುವವರನ್ನು ಮೂಲೆ ಗುಂಪು ಮಾಡಿ ಹತ್ತಿಕ್ಕಲು ನೆರವಾಗುವುದು.

ಹೊಸ ಅಧ್ಯಾಯ ಆರಂಭಿಸಿದ ವಿಯೆಟ್ನಾಂ

ಕಮ್ಯುನಿಸ್ಟ್ ಪಕ್ಷಗಳಿಗೆ ತಮ್ಮ ಪ್ರತಿಯೊಂದು ಮಹಾಧಿವೇಶನ ಕೂಡಾ ಒಂದು ಮೈಲಿಗಲ್ಲು. ಆದರೆ ಡಿಸೆಂಬರ್ 15 ರಿಂದ18ರ ವರೆಗೆ ಜರುಗಿದ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ 6ನೇ ಮಹಾಧಿವೇಶನಕ್ಕೆ ಇದಕ್ಕೂ ಹೆಚ್ಚಿನ ಮಹತ್ವವಿತ್ತು. ಅಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿ ಟ್ರೃಹೊಂಗ್ ಚಿನ್‌ರವರು ಮಂಡಿಸಿದ ಕೇಂದ್ರ ಸಮಿತಿಯ ರಾಜಕೀಯ ವರದಿ ಒಂದು ಚಾರಿತ್ರಿಕ ದಾಖಲೆ. ಇದನ್ನು ಈ ಮೊದಲೇ ಜುಲೈ ತಿಂಗಳಿಂದ ದೇಶಾದ್ಯಂತ ಎಲ್ಲಾ 18 ಲಕ್ಷ ಸದಸ್ಯರು ಕೂಲಂಕುಷವಾಗಿ ತಮ್ಮ ಘಟಕಗಳಲ್ಲಿ, 40 ಪ್ರಾಂತೀಯ ಸಮ್ಮೇಳನಗಳಲ್ಲಿ ಚರ್ಚಿಸಿ ಸಾವಿರಾರು ಸಲಹೆ–ಸೂಚನೆಗಳನ್ನು ಕೇಂದ್ರಸಮಿತಿಗೆ ಕಳಿಸಿದ್ದರು.

"ಸತ್ಯವನ್ನು ದಿಟ್ಟಿಸಿ ನೋಡಿ, ಸಂಗತಿಗಳನ್ನು ಸರಿಯಾಗಿ ವಿಶ್ಲೇಷಿಸಿ, ಪೂರ್ಣಸತ್ಯವನ್ನು" ಹೇಳಿರುವ 150 ಪುಟಗಳ ವರದಿಯಲ್ಲಿ 5 ಅಧ್ಯಾಯಗಳಿವೆ - ಪರಿಸ್ಥಿತಿ ಮತ್ತು ಗುರಿ, ಸಾಮಾಜಿಕ- ಆರ್ಥಿಕ ಧೋರಣೆಯ ಮುಖ್ಯ ಉದ್ದೇಶಗಳು, ವಿದೇಶ ಸಂಬಂಧಗಳ ಬಗ್ಗೆ ಪಕ್ಷ ಹಾಗೂ ಪ್ರಭುತ್ವದ ಗುರಿ ಮತ್ತು ಧೋರಣೆ, ದುಡಿಯುವ ಜನರ ಯಜಮಾನಿಕೆಯ ಪ್ರಶ್ನೆಯನ್ನು ಎತ್ತಿ ಹಿಡಿಯುವುದು, ಹಾಗೂ ಸಮಾಜವಾದೀ ಪ್ರಭುತ್ವದ ಆಡಳಿತ ಕಾರ್ಯದ ದಕ್ಷತೆಯನ್ನು, ಪಕ್ಷದ ಮುಖಂಡತ್ವದ ಸಾಮರ್ಥ್ಯವನ್ನು ಉನ್ನತಗೊಳಿಸುವುದು.

ಕ್ರಾಂತಿ ನಂತರದ ವರ್ಷಗಳ ಅನುಭವದಿಂದ ಮುಖ್ಯವಾಗಿ ಪಕ್ಷ ಕಲಿತಿರುವ ಪಾಠಗಳೆಂದರೆ (1) ತನ್ನೆಲ್ಲಾ ಚಟುವಟಿಕೆಗಳಲ್ಲಿ "ಜನರೇ ಮೂಲ ಬೇರುಗಳು" ಎಂಬ ವಿಚಾರವನ್ನು ಪಕ್ಷ ಪೂರ್ಣವಾಗಿ ಅರಿಯಬೇಕು (2) ಪಕ್ಷ ಸದಾ ವಾಸ್ತವ ಸ್ಥಿತಿಯನ್ನು ಗ್ರಹಿಸಿ, ವಸ್ತುನಿಷ್ಟ ನಿಯಮಗಳನ್ನು ಪಾಲಿಸಿ, ಅದರಂತೆ ಕಾರ್ಯಪ್ರವೃತ್ತವಾಗಬೇಕು. (3) ದೇಶದ ಸಾಮರ್ಥ್ಯವನ್ನು ಯುಗದ ಸಾಮರ್ಥ್ಯದೊಂದಿಗೆ ಹೇಗೆ ಬೆಸೆಯಬೇಕು ಎಂಬುದನ್ನು ತಿಳಿಯಬೇಕು ಹಾಗೂ (4) ಸಾಮಾಜಿಕ ಕ್ರಾಂತಿಯ ಮುಖಂಡತ್ವ ವಹಿಸಿ ಅಧಿಕಾರದಲ್ಲಿರುವ ಪಕ್ಷ ರಾಜಕೀಯ ಗುರಿಗಳನ್ನು ಸಾಧಿಸುವ ಸಾಮರ್ಥ್ಯ ಪಡೆಯುವುದು. ಇವನ್ನು ವಿವರವಾಗಿ ವಿಶ್ಲೇಷಿಸಿರುವ ವರದಿ ಸಮಾಜವಾದೀ ರಚನೆಯ ಮೊದಲ ಹಂತದಲ್ಲಿ ಸಾಮಾಜಿಕ–ಆರ್ಥಿಕ ಪರಿಸರವನ್ನು ಸ್ಥಿರಗೊಳಿಸಿ ಮುಂದಿನ ಹಂತದ ಸಮಾಜವಾದೀ ಕೈಗಾರಿಕೀಕರಣಕ್ಕೆ ರಂಗವನ್ನು ಸಿದ್ಧಗೊಳಿಸುವ ಸಾಮರ್ಥ್ಯವನ್ನು ದೇಶ ಪಡೆದಿದೆ, ಅದನ್ನು ವಾಸ್ತವಗೊಳಿಸಲು ಸಾಮಾಜಿಕ ಹಾಗೂ ಆರ್ಥಿಕ ಧೋರಣೆಗಳನ್ನು ಬದಲಿಸಿಕೊಳ್ಳಬೇಕು ಎಂದಿದೆ. ಇದಕ್ಕಾಗಿ (1) ಉತ್ಪಾದನಾ ವ್ಯವಸ್ಥೆಯನ್ನು ಪುನರ್‌ರಚಿಸಿ ಹಾಗೂ ಬಂಡವಾಳ ಹೂಡಿಕೆಯ ವಿಧಾನಗಳ ಮರು ಹೊಂದಾಣಿಕೆ ಮಾಡಿ ಆಹಾರ, ಬಳಕೆಯ ವಸ್ತುಗಳು ಹಾಗೂ ರಫ್ತುಗಳಲ್ಲಿ ಹೆಚ್ಚಿನ ಒತ್ತು ನೀಡುವುದು (2) ಇತರ ಆರ್ಥಿಕ ಅಂಶಗಳನ್ನು ಸರಿಯಾಗಿ ಬಳಸಿ, ಅವನ್ನು ಪರಿವರ್ತಿಸಿ ಸಮಾಜವಾದೀ ಉತ್ಪಾದನಾ ಸಂಬಂಧಗಳನ್ನು ಕಟ್ಟುವುದು ಹಾಗೂ ಬಲಪಡಿಸುವುದು (3) ಅಧಿಕಾರಶಾಹೀ ಕೇಂದ್ರೀಕರಣವನ್ನು ನಿರ್ನಾಮಗೊಳಿಸಿ ಪ್ರಜಾಸತ್ತಾತ್ಮಕ ಕೇಂದ್ರೀಕರಣದ ನೀತಿಯನ್ನು ಆರ್ಥಿಕ ನಿರ್ವಹಣೆಯಲ್ಲಿ ಜ್ಯಾರಿಗೆ ತರುವುದು (4) ವಿಜ್ಞಾನ ಹಾಗೂ ತಂತ್ರಜ್ಞಾನದ ಚಾಲಕ ಶಕ್ತಿಯನ್ನು ಆರ್ಥಿಕತೆಯಲ್ಲಿ ಪೂರ್ಣವಾಗಿ ಬಳಸಿಕೊಳ್ಳುವುದು ಹಾಗೂ (5) ವಿದೇಶೀ ಆರ್ಥಿಕ ಸಂಬಂಧಗಳನ್ನು, ಪ್ರಮುಖವಾಗಿ ಸಮಾಜವಾದೀ ದೇಶಗಳೊಂದಿಗೆ, ಲಾವೋಸ್ ಹಾಗೂ ಕಂಪೂಚಿಯಾದೊಂದಿಗೆ ಸಹಕಾರ ಹಾಗೂ ಅಂತರರಾಷ್ಟ್ರೀಯ ಶ್ರಮ ವಿಭಜನೆಯ ಆಧಾರದ ಮೇಲೆ ವ್ಯಾಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸುವುದು– ಈ ಪ್ರಮುಖ ಧೋರಣೆಗಳನ್ನು ಅನುಸರಿಸಬೇಕು ಎಂದು ವರದಿ ಅಭಿಪ್ರಾಯಪಟ್ಟಿತು.

ಆರ್ಥಿಕ ಹಾಗೂ ಸಾಮಾಜಿಕ ಆಡಳಿತದಲ್ಲಿ' ಧೋರಣೆಗಳನ್ನು ರೂಪಿಸುವಲ್ಲಿ, ಜ್ಯಾರಿಗೆ ತರುವಲ್ಲಿ ದುಡಿಯುವ ಜನರು ಪಾತ್ರ ವಹಿಸುವಂತೆ ಪ್ರೋತ್ಸಾಹ ನೀಡುವುದು ಅತ್ಯಗತ್ಯ. "ಧೋರಣೆಗಳನ್ನು ಜನತೆ ತಿಳಿಯಲಿ, ಚರ್ಚಿಸಲಿ, ಅದನ್ನು ಕಾರ್ಯರೂಪಕ್ಕಿಳಿಸಲಿ, ಪರೀಕ್ಷಿಸಲಿ." ಎಂಬುದು ಹೊಸ ಸಮಾಜದ ದಿನಚರ್ಯೆ ಆಗಬೇಕು ಎಂದಿರುವ ರಾಜಕೀಯ ವರದಿ ಇದಕ್ಕನುಗುಣವಾಗಿ ಪಕ್ಷದ ಮುಖಂಡತ್ವ ಮತ್ತು ಸಮಸ್ತ ಪಕ್ಷ ತನ್ನ ಆರ್ಥಿಕ ಚಿಂತನೆಯಲ್ಲಿ, ಸಂಘಟನೆಯಲ್ಲಿ, ಕಾರ್ಯನಿರ್ವಹಿಸುವ ಶೈಲಿಯಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಅಗತ್ಯವಾಗಿ ಮಾಡಿಕೊಳ್ಳಬೇಕು ಎಂದು ಪಕ್ಷದ ಮುಖಂಡತ್ವದ, ಸದಸ್ಯರ ದೌರ್ಬಲ್ಯಗಳನ್ನು, ತಪ್ಪು ವಿಚಾರಗಳನ್ನು, ಸೈದ್ಧಾಂತಿಕ ಕೊರತೆಗಳನ್ನು ವಿಮರ್ಶಿಸಿ ಅವನ್ನೆಲ್ಲಾ ಹೇಗೆ ನಿವಾರಿಸಿಕೊಳ್ಳಬೇಕು, ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸರಿಯಾಗಿ ಅನ್ವಯಿಸುತ್ತಾ ಹೇಗೆ ಪಕ್ಷದ ಮರು ನವೀಕರಣ ನಡೆಸಬೇಕು ಎಂಬುದನ್ನು ಚರ್ಚಿಸಿದೆ.

ಈ ರಾಜಕೀಯ ವರದಿಯನ್ನು ಹಾಗೂ ನಂತರ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ವೊವಾನ್ ಕಿಯೆಟ್ ಮಂಡಿಸಿದ 1986-90ರ ಅವಧಿಯ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಗುರಿಗಳು ಹಾಗೂ ಮುಖ್ಯ ಧೋರಣೆಗಳನ್ನು ಕುರಿತಾದ ವರದಿಯನ್ನು ಮಹಾಧಿವೇಶನ ವಿವರವಾಗಿ ಚರ್ಚಿಸಿ ಅಂಗೀಕರಿಸಿತು.

ಎರಡನೇ ದಿನ ಪಕ್ಷದ ಹಿರಿಯ ಮುಖಂಡರಾದ ಕಾಂ. ಟ್ರೃವೊಂಗ್ ಚಿನ್, ಪಾಮ್ ವಾಂಮ್ ಡೊಂಗ್ ಹಾಗೂ ಲೆಡಕ್ ಥೋ ತಮ್ಮ ಅನಾರೋಗ್ಯದ ಕಾರಣ ಕೇಂದ್ರಸಮಿತಿಯಿಂದ ನಿವೃತ್ತರಾಗುವ ತಮ್ಮ ಕೋರಿಕೆಯನ್ನು ಮಹಾಧಿವೇಶನ ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡರು. ಹೋಚಿಮಿನ್ಹ್ ಜತೆಗೆ ಆರಂಭಿಸಿ ನವ ವಿಯೆಟ್ನಾಂ ಸಮಾಜವನ್ನು ಕಟ್ಟುವಲ್ಲಿ ದೀರ್ಘಸೇವೆ ಸಲ್ಲಿಸಿದ ಈ ಸಂಗಾತಿಗಳ ಅಮೂಲ್ಯ ಕೊಡುಗೆಗಳನ್ನು

ಏಷ್ಯಾದ ಪ್ರಮುಖ ಸಮಾಜವಾದಿ ದೇಶಗಳಾದ ಚೀನ, ವಿಯಟ್ನಾಂಗಳಲ್ಲಿ ಪ್ರಮುಖ ಬದಲಾವಣೆಗಳಾಗಿವೆ. ವಿಯಟ್ನಾಂನ ಪಕ್ಷ ಹಿಂದಿನ ತಪ್ಪುಗಳನ್ನು ವಿಮರ್ಶಿಸಿ ಕೊಂಡು ಹೊಸ ಪಥವನ್ನು ತುಳಿಯುವ ನಿರ್ಧಾರ ಕೈಗೊಂಡರೆ ಚೀನದಲ್ಲಿ ಬಂಡವಾಳಶಾಹಿ ಸಿದ್ಧಾಂತಗಳ ವಿರುದ್ಧ ಹೋರಾಟ

ಸ್ಮರಿಸಿಕೊಂಡ ಮಹಾಧಿವೇಶನ ಅವರ ಕೋರಿಕೆಗಳನ್ನು ಒಪ್ಪಿಕೊಂಡಿತು. ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷವನ್ನು ಹಾಗೂ ವಿಯೆಟ್ನಾಂ ಸಮಾಜವಾದೀ ಪ್ರಭುತ್ವವನ್ನು ಸಮರ್ಥವಾಗಿ ಮುನ್ನಡೆಸುವ ಸಾಮರ್ಥ್ಯವುಳ್ಳ ಒಂದು ಹೊಸ ಮುಖಂಡತ್ವ ರೂಪುಗೊಂಡಿದೆಯೆಂಬ ತೃಪ್ತಿ ಈ ಹಿರಿಯ ಸಂಗಾತಿಗಳಲ್ಲಿ ಕಂಡುಬರುತ್ತಿತ್ತು. ಮಹಾಧಿವೇಶನದ ಕೋರಿಕೆಯ ಮೇರೆಗೆ ಈ ಸಂಗಾತಿಗಳು ಕೇಂದ್ರಸಮಿತಿಗೆ ಸಲಹಾಗಾರರಾಗಿ ಮುಂದುವರೆಯಲು ಒಪ್ಪಿಕೊಂಡರು. ಪಕ್ಷದ ಎಲ್ಲಾ ಸ್ಥರಗಳಲ್ಲಿ 40 ಶೇಕಡಾದಷ್ಟು ಸ್ಥಾನಗಳಲ್ಲಿ ಯುವ ಸಂಗಾತಿಗಳಿಗೆ ಜವಾಬ್ದಾರಿ ವಹಿಸಿಕೊಡಲಾಗುವುದೆಂದೂ ಮಹಾಧಿವೇಶನಕ್ಕೆ ವರದಿ ಮಾಡಲಾಯಿತು.

6ನೇ ಮಹಾಧಿವೇಶನ 120 ಪೂರ್ಣ ಸದಸ್ಯರು ಹಾಗೂ 49 ಅಭ್ಯರ್ಥಿ ಸದಸ್ಯರುಳ್ಳ ಹೊಸ ಕೇಂದ್ರ ಸಮಿತಿಯನ್ನು ಆರಿಸಿತು. ಈ ಕೇಂದ್ರ ಸಮಿತಿ 13 ಸದಸ್ಯರು ಹಾಗೂ ಒಬ್ಬ ಪರ್ಯಾಯ ಸದಸ್ಯರನ್ನುಳ್ಳ ಪಾಲಿಟ್ ಬ್ಯೂರೋವನ್ನು ಹಾಗೂ 13 ಸದಸ್ಯರುಳ್ಳ ಕಾರ್ಯದರ್ಶಿ ಮಂಡಳಿಯನ್ನು ಚುನಾಯಿಸಿತು. ಕಾಮ್ರೇಡ್ ನ್ಯೂಗೆನ್ ವಾನ್ ಲೀ ಪ್ರಧಾನ ಕಾರ್ಯದರ್ಶಿಗಳಾಗಿ ಚುನಾಯಿತರಾದರು.

ಈ ಮಹಾಧಿವೇಶನದಲ್ಲಿ 1129 ಪ್ರತಿನಿಧಿಗಳು ಭಾಗವಹಿಸಿದರು. ಎಲ್ಲಾ ಖಂಡಗಳ ಕಮ್ಯುನಿಸ್ಟ್ ಪಕ್ಷಗಳನ್ನು, ವಿಮೋಚನಾ ಹೋರಾಟಗಳನ್ನು ಪ್ರತಿನಿಧಿಸುವ 35 ವಿದೇಶೀ ಸೌಹಾರ್ದ ಪ್ರತಿನಿಧಿ ಮಂಡಲಿಗಳು ಈ ಅಧಿವೇಶನಕ್ಕೆ ಆಗಮಿಸಿದ್ದವು. ಸಿ. ಪಿ. ಐ. [ಎಂ]. ಪರವಾಗಿ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಹರ್‌ಕಿಶನ್‌ಸಿಂಗ್ ಸುರ್ಜಿತ್ ಈ ಚಾರಿತ್ರಿಕ ಸಂದರ್ಭದಲ್ಲಿ ಹಾಜರಿದ್ದರು.

30 ವರ್ಷಗಳ ಕಾಲ ಸಾಮ್ರಾಜ್ಯಶಾಹೀ-ವಿರೋಧಿ ವಿಮೋಚನಾ ಯುದ್ಧ ಅನುಭವಿಸಿರುವ ವಿಯೆಟ್ನಾಂಗೆ ಇಂದು ಒಂದೆಡೆ ಸಮಾಜವಾದೀ ರಚನೆ ಆರಂಭ ಮಾಡುವ ಅಗತ್ಯವಿದ್ದರೆ ಇನ್ನೊಂದೆಡೆ ಮಾತೃಭೂಮಿಯ ರಕ್ಷಣೆಯ ಪ್ರಶ್ನೆಯನ್ನು ಎದುರಿಸಬೇಕಾಗಿದೆ. ಇಂದೂ ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಬಾಂಬು ಮಳೆಯ ಕಲೆಗಳು ಮಾಸಿರದ, ದಕ್ಷಿಣದಲ್ಲಿ ಸುಮಾರಾಗಿ ಸಕಲವೂ ನಾಶಗೊಂಡ, ಉತ್ತರ ಭಾಗದಲ್ಲಿ ಇದರಿಂದಾಗಿ ಸಮಾಜವಾದೀ ರಚನೆಗೆ ತಡೆಯುಂಟಾದ ಒಂದು ದೇಶದಲ್ಲಿ ಪುನರ್ ರಚನೆಯ ಕಾರ್ಯ ಸುಲಭ ಸಾಧ್ಯವೇನಲ್ಲ. ಆದರೆ ಕಠಿಣ ಹೋರಾಟದ ಬೆಂಕಿಯಲ್ಲಿ ಪುಟಗೊಂಡ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ವಿಯೆಟ್ನಾಂ ಜನತೆಗೆ ಮುಖಂಡತ್ವ ನೀಡುತ್ತಾ ಬಂದಿದೆ. ವಿಯೆಟ್ನಾಂ ಜನತೆ ತನ್ನೆಲ್ಲಾ ಸಂಕಟ, ದುಃಖ–ದುಮ್ಮಾನಗಳ ನಡುವೆ ಹೋಚಿಮಿನ್ಹರ ಈ ಪಕ್ಷದ ಬೆನ್ನ ಹಿಂದೆ ಒಗ್ಗಟ್ಟಾಗಿ ನಿಂತಿದೆ.

ಈ ಆರನೇ ಅಧಿವೇಶನದಲ್ಲಿ ಪಕ್ಷ ವಿಯೆಟ್ನಾಂ ಜನತೆಯ ಸಮಸ್ಯೆಗಳನ್ನು ವಿವರವಾಗಿ ಪರಿಶೀಲಿಸಿ, ಅದನ್ನು ಪರಿಹರಿಸಲು ಮಾಡಿದ ತನ್ನ ಪ್ರಯತ್ನಗಳನ್ನೂ, ಅದರಲ್ಲಿ ತನ್ನ ದೌರ್ಬಲ್ಯಗಳನ್ನು ವಿವರವಾಗಿ ವಿಮರ್ಶಿಸಿಕೊಂಡಿದೆ. "ದೇಶದ ಆರ್ಥಿಕ ಹಾಗೂ ರಾಜಕೀಯ ಜೀವನದಲ್ಲಿನ ಪರಿಸ್ಥಿತಿಯ ಈ ಸರ್ವತೋಮುಖ ಸ್ವವಿಮರ್ಶಾತ್ಮಕ ಪರಿಶೀಲನೆ ತನ್ನ ದೌರ್ಬಲ್ಯಗಳನ್ನು ಮೀರಿ ನಿಂತು ಸಮಾಜವಾದೀ ವಿಯೆಟ್ನಾಂ ಕಟ್ಟುವತ್ತ ಮುನ್ನುಗ್ಗುವ ಪಕ್ಷದ ದೃಢ ನಿರ್ಧಾರವನ್ನು ತೋರಿಸುತ್ತದೆ ಎಂದು ಕಾಂ. ಸುರ್ಜಿತ್ ಚಾರಿತ್ರಿಕ ಮಹಾಧಿವೇಶನದ ಬಗ್ಗೆ ಹೇಳಿದ್ದಾರೆ.

ಚೀನಾ ವಿದ್ಯಾರ್ಥಿಗಳ ಮತಪ್ರದರ್ಶನ

ಚೀನಾದಲ್ಲಿನ ವಿದ್ಯಾರ್ಥಿ ಪ್ರದರ್ಶನಗಳು ವಿಶ್ವದ ಸಾಮ್ರಾಜ್ಯಶಾಹಿಗಳಿಗೆ ಹಾಲುಣಿಸಿದಂತಾಗಿದೆ. ಅವರ ಪತ್ರಿಕೆಗಳು ವಾರ್ತಾ ಮಾಧ್ಯಮಗಳು ಈ ಘಟನೆಗಳನ್ನ ಉಬ್ಬುಬ್ಬಿಸಿ ಪಸಾರ ಮಾಡುತ್ತಿವೆ. ಇದೇ ಸಮಯದಲ್ಲಿ ಫ್ರಾನ್ಸ್ ನಾದ್ಯಂತ ನಡೆದ ವಿದ್ಯಾರ್ಥಿ ಗಲಭೆಗಳಿಗೆ ಕೊಟ್ಟ ಪ್ರಚಾರಕ್ಕೂ ಚೀನದ ವಿದ್ಯಾರ್ಥಿ ಮತಪ್ರದರ್ಶನಕ್ಕೂ ಕೊಟ್ಟ ಮಹತ್ವವನ್ನು ಹೋಲಿಸಿ ನೋಡಿದರೆ ಈ ಸಂಗತಿ ಸ್ಪಷ್ಟವಾಗುತ್ತದೆ.

ವಾಯ್ಸ್ ಆಫ್ ಅಮೇರಿಕ ಅಥವಾ ಅಮೇರಿಕಾ ವಾಣಿ ಎಂಬ ಆಕಾಶವಾಣಿಯ ಪ್ರಚೋದನೆ, ಕೆಲವು ವಿದ್ರೋಹಿಗಳ ಕ್ರಾಂತಿ ವಿರೋಧಿ ಚಟುವಟಿಕೆಗಳು ಇವೆಲ್ಲವೂ ಅಡಕವಾಗಿರುವ ಈ ಘಟನೆಗಳ ಸಂಬಂಧದಲ್ಲಿ ವಿದ್ಯಾರ್ಥಿಗಳ ಬಗ್ಗೆ ಜನತಾ ಚೀನದ ಸರ್ಕಾರ ತೋರಿಸಿದ ಸಂಯಮ ಪೂರಿತ ನಡವಳಿಕೆ ಬಹಳ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ವಿದ್ಯಾರ್ಥಿಗಳ ಬಗ್ಗೆ ಮೃದುವಾಗಿಯೇ ನಡೆದುಕೊಂಡ ಸರ್ಕಾರ ಹಾಗೂ ಕಮ್ಯುನಿಸ್ಟ್ ಪಕ್ಷ ಈ ಘಟನೆಗಳ ಮೂಲ ಕಾರಣರಾದ, ಬಂಡವಾಳ ಶಾಹಿ ಮೌಲ್ಯಗಳನ್ನು ಪ್ರಚಾರ ಮಾಡುತ್ತಿರುವ ಕೆಲವು ಪಕ್ಷದ ಸದಸ್ಯರ ಮೇಲೆ (ವಿದ್ಯಾರ್ಥಿ ಪ್ರದರ್ಶನ ಆರಂಭವಾದ ಹೈಫೈ ವಿ. ವಿ. ಯ ಒಬ್ಬ ಉಪಾಧ್ಯಕ್ಷ ಹಾಗೂ ಶಾಂಘೈ ನಗರದ ಬರಹಗಾರರನ್ನು) ಅವರ ಹುದ್ದೆಗಳಿಂದ ಹಾಗೂ ಪಕ್ಷದಿಂದ ತೆಗೆಯಲಾಗಿದೆ. ಈ ಜನ ಮಂಡಿಸುತ್ತಿದ್ದ ವಾದಗಳ ಬಗ್ಗೆ ಎಚ್ಚರದಿಂದಿರದೆ ನಿರ್ಲಕ್ಷ್ಯ ಮಾಡಿ ಈ ಬಂಡವಾಳಶಾಹಿ ಉದಾರವಾದ ಹಬ್ಬಲು ಕಾರಣರಾದ ಪಕ್ಷದ ಒಬ್ಬಿಬ್ಬ ಸದಸ್ಯರ ಮೇಲೂ ಯೋಗ್ಯ ಕ್ರಮ ಕೈಗೊಳ್ಳಲಾಗಿದೆ. ಪಕ್ಷದ ಕಾರ್ಯದರ್ಶಿ ಹುಯಾವೋಬಾಂಗ್‌ರವರನ್ನು ಬದಲಾಯಿಸಲಾಗಿದೆ.

ಈ ಕ್ರಮವನ್ನು ಬಂಡವಾಳಶಾಹಿ ಪ್ರಚಾರ ಮಾಧ್ಯಮಗಳು ಭೂತಗನ್ನಡಿಯಲ್ಲಿಟ್ಟು ತೋರಿಸಲು ಚೀನಾದಲ್ಲಿ ಸುಧಾರಣೆಗಳ ನಿಲುಗಡೆ, ಸ್ವಾತಂತ್ರ್ಯಕ್ಕೆ ಧಕ್ಕೆ ಎಂಬ ಕೂಗನ್ನೆತ್ತಲು ಪ್ರಯತ್ನಿಸುತ್ತಿದ್ದಾರೆ. ಅಮೇರಿಕದಲ್ಲಿ ಕಲಿಯುತ್ತಿರುವ ಚೀನಾ ವಿದ್ಯಾರ್ಥಿಗಳ ಪ್ರದರ್ಶನವೊಂದು ಅಲ್ಲಿ ನಡೆಯಿತೆಂಬ ವರದಿ ಇದಕ್ಕೊಂದು ಸಾಕ್ಷಿಯಾಗಿದೆ. ಚೀನಾದ ಕಮ್ಯುನಿಸ್ಟ್ ಪಕ್ಷ ತನ್ನ ಸದಸ್ಯರ ಅಪಾಯಕಾರಿ ವರ್ತನೆಯ ಬಗ್ಗೆ ಕೂಡ ಕ್ರಮ ಕೈಗೊಳ್ಳಬಾರದು ಎನ್ನುವ ಲಾಠಿ, ಗುಂಡೇಟುಗಳಿಂದ ವಿದ್ಯಾರ್ಥಿ ಚಳುವಳಿಗಳನ್ನು ಶಾಂತಿ ಚಳುವಳಿಗಳನ್ನು ಎದುರಿಸುವ ದೇಶಗಳ ದ. ಆಫ್ರಿಕಾದ ಭೀಭತ್ಸ ಕ್ರೌರ್ಯಕ್ಕೆ ಬೆಂಬಲ ನೀಡುವ ದೇಶಗಳ ಈ ಪ್ರಚಾರ ವಿಚಿತ್ರವಾದುದು ಇದು ಇವರ "ಮಾನವ ಹಕ್ಕು"ಗಳ ಕಲ್ಪನೆ.

ಈ ಎಲ್ಲಾ ಘಟನೆಗಳನ್ನು ಓದುವಾಗ, 1921ರಲ್ಲಿ 'ಹೊಸ ಆರ್ಥಿಕ ಕಾರ್ಯಕ್ರಮ' ರೂಪಿಸಿದ ಲೆನಿನ್‌ರವರು, ಈ ಆರ್ಥಿಕ ಸುಧಾರಣೆಗಳು ಮೆನ್ಷೆವಿಕ್, ವಾದಕ್ಕೆ ಸಾಮಾಜಿಕ ಕ್ರಾಂತಿಕಾರಿಗಳೆಂಬ ಅಲ್ಲಿನ ಪುಟ್ಟ

(8ನೇ ಪುಟ ನೋಡಿ)

ಬಿಹಾರ ರಾಜ್ಯದಲ್ಲಿ ಮತ್ತೆ ಹತ್ಯಾಕಾಂಡ

ಬಿಹಾರದ ಜಿಲ್ಲಾ ಕೇಂದ್ರವಾದ ಭಾಗಲ್ಪುರದಿಂದ 35 ಕಿ. ಮೀ. ದೂರದಲ್ಲಿರುವ ಒಂದು ಕುಗ್ರಾಮ ಕಿರಿದಾಂಡ. ಇಲ್ಲಿರುವ 150 ಕುಟುಂಬಗಳಲ್ಲಿ ಹೆಚ್ಚಿನವರು ಭೂಹೀನ ಕೃಷಿ ಕಾರ್ಮಿಕರು ಮತ್ತು ಗೇಣಿ ರೈತರು. ಡಿಸೆಂಬರ್ 5ರ ಮುಂಜಾನೆ ಈ ಹಳ್ಳಿಯಲ್ಲಿ ಪೋಲೀಸರು ಮತ್ತು ಭೂಮಾಲಿಕರ ಗೂಂಡಾಗಳು ಹೆಂಗಸರ ಮೇಲೆ ನಡೆಸಿದ ಭೀಬತ್ಸಕರ ದಬ್ಬಾಳಿಕೆಯ ಎದುರು ಸಿಡಿದೆದ್ದ ಬಡ ಗೇಣಿದಾರರು ತಮ್ಮ ನ್ಯಾಯಯುತ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಿ. ಪಿ. ಐ. [ಎಂ]. ಮತ್ತು ಕಿಸಾನ್ ಸಭಾದ ಅಡಿಯಲ್ಲಿ ಸಂಘಟಿತ ಹೋರಾ - ನಡೆಸುತ್ತಿದ್ದರು. ಕಾಂ. ಬಿಲಾಸ್ ಮಂಡಲ್ ಅವರು ಮುಖಂಡರಾಗಿದ್ದರು. ಮುಖಂಡನನ್ನು ಮುಗಿಸಿ ಬಿಟ್ಟರೆ ಹೋರಾಟ ಕೊನೆಗೊಳ್ಳುತ್ತದೆಂದು ತಿಳಿದ ಭೂಮಾಲಕರು ಪೋಲೀಸರೊಂದಿಗೆ ಶಾಮೀಲಾಗಿ ತಮ್ಮ ದಾರಿಗೆ ಮುಳ್ಳಾಗಿದ್ದ ಕಾಂ. ಬಿಲಾಸ್ ಮಂಡಲ್ ಅವರನ್ನು ಕೊಲೆ ಮಾಡುವ ಉದ್ದೇಶದಿಂದ ಪೋಲೀಸರು ಮತ್ತು ಗೂಂಡಾಗಳೊಂದಿಗೆ ಆ ಗ್ರಾಮಕ್ಕೆ ಮುತ್ತಿಗೆ ಹಾಕಿದರು. ತಮ್ಮ ಮುಖಂಡನನ್ನು ಪೋಲೀಸರಿಗೊಪ್ಪಿಸಲು ನಿರಾಕರಿಸಿದ ಹಳ್ಳಿಯ ಹೆಂಗಸರು ಪೋಲೀಸರನ್ನು ತಡೆದರು. ಆಗ ಪೋಲೀಸರು ಮತ್ತು ಗೂಂಡಾಗಳು ಲಾಠಿಗಳಿಂದ ಬಂದೂಕ್‌ಗಳಿಂದ ಅವರ ಮೇಲ್ಲೆ ಆಕ್ರಮಣ ನಡೆಸಿದರು. ಆಕ್ರಮಣವನ್ನು ಧೈರ್ಯವಾಗಿ ಎದುರಿಸಿದ ಹೆಂಗಸರು ಪೋಲೀಸರನ್ನು ಹಿಮ್ಮೆಟ್ಟಿಸಿದರು.

ಎರಡು ಗಂಟೆಗಳ ನಂತರ ಹೆಚ್ಚಿನ ಬಲನೊಂದಿಗೆ ಬಂದಿಳಿದ ಪೋಲೀಸರು ಮತ್ತೆ ಧಾಳಿಯನ್ನು ನಡೆಸಿದರು. ಹೆಂಗಸರು ಮತ್ತೊಮ್ಮೆ ಅದನ್ನು ಪ್ರತಿಭಟಿಸಿದರು. ಆಗ ಪೋಲೀಸರು ಮತ್ತು ಗೂಂಡಾಗಳು ನಿರಾಯುಧ ಹೆಂಗಸರ ಗುಂಪಿನ ಮೇಲೆ ಗುಂಡು ಹಾರಿಸಿದರು. ಪೋಲೀಸರು ಮತ್ತು ಭೂಮಾಲಕರು ಜಂಟಿಯಾಗಿ ನಡೆಸಿದ ಈ ಹತ್ಯಾಕಾಂಡದಲ್ಲಿ 55 ವರ್ಷದ ಮತಿಯಾದೇವಿ, 30 ವರ್ಷ ವಯಸ್ಸಿನ ಸುಚಿತಾದೇವಿ ಮತ್ತು ಹೊಸತಾಗಿ ವಿವಾಹವಾಗಿದ್ದ 12 ವರ್ಷ ವಯಸ್ಸಿನ ಗೀತಾದೇವಿ ಕಗ್ಗೊಲೆಗೀಡಾದರು. ಇಬ್ಬರು ಮಹಿಳೆಯರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ. ಹಲವಾರು ಮಹಿಳೆಯರಿಗೆ ತೀವ್ರ ಪೆಟ್ಟುಗಳು ಬಿದ್ದಿವೆ.

ಇಂತಹ ಭೀಕರ ನರಮೇಧದ ನಡುವೆಯೂ ವೀರಾವೇಶದಿಂದ ಹೋರಾಡಿದ ಮಹಿಳೆಯರು ಮತ್ತೊಮ್ಮೆ ಪೋಲೀಸರನ್ನು ಗೂಂಡಾಗಳನ್ನು ಹಿಮ್ಮೆಟ್ಟಿಸಿದರು. ಮೂರನೆಯ ಬಾರಿಗೆ ಇನ್ನೂ ಹೆಚ್ಚಿನ ಬಲನೊಂದಿಗೆ ಹಳ್ಳಿಯ ಮೇಲೆ ಧಾಳಿ ನಡೆಸಿದ ಪೋಲೀಸರು, ಸತ್ತವರ ಮೃತದೇಹಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡು, ಕುಟುಂಬದವರು ಮೃತದೇಹಗಳ ಅಂತ್ಯಕ್ರಿಯೆ ನಡೆಸುವಂತೆ ಒತ್ತಾಯಿಸಿದರು.

'ಬೆಲ್ಚಿ' ಯಿಂದ ಭಾಗಲ್ಪುರದ ಕ್ರೂರತೆಯಿಂದ, ಇತ್ತೀಚೆಗೆ ಅರ್ವಾಲ್ ಹತ್ಯಾಕಾಂಡದಿಂದ ಕುಪ್ರಸಿದ್ಧವಾಗಿರುವ ಬಿಹಾರದಲ್ಲಿ ಮತ್ತೊಂದು ಹತ್ಯಾಕಾಂಡ

ಘಟನೆಯ ನಂತರ ಸಿ.ಪಿ.ಐ. [ಎಂ] ನ ಬಿಹಾರ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಗಣೇಶ್ ಶಂಕರ್ ವಿದ್ಯಾರ್ಥಿ ಅವರ ನೇತೃತ್ವದ ತಂಡ ಆ ಗ್ರಾಮಕ್ಕೆ ಭೇಟಿಕೊಟ್ಟು ಘಟನೆಯ ಬಗ್ಗೆ ಪರಿಶೀಲನೆ ನಡೆಸಿತು. ನಂತರ ಪತ್ರಿಕಾ ಗೋಷ್ಠಿಯನ್ನು ಕರೆದು ಘಟನೆಯ ಬಗ್ಗೆ ನಿಜ ಸಂಗತಿಗಳನ್ನು ವಿವರಿಸಿತು.

ಪೋಲೀಸರು ತಮ್ಮ ಹೇಡಿತನದ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಸುಳ್ಳು ಕಥೆಗಳನ್ನು ಹೆಣೆದಿದ್ದಾರೆ. ಭೂಮಾಲಕರ ಬೆಳೆಯನ್ನು ಸಾಗಿಸುತ್ತಿದ್ದ ಎತ್ತಿನಗಾಡಿಗಳನ್ನು ತಡೆದು ಅದನ್ನು ಲೂಟಿ ಮಾಡಲು ಗ್ರಾಮಸ್ಥರು ಯತ್ನಿಸಿದಾಗ ಅದನ್ನು ತಪ್ಪಿಸಲು ಬಂದ ಪೋಲೀಸರ ಮೇಲೆ ಧಾಳಿ ನಡೆಸಿ ಇಬ್ಬರು ಪೇದೆಗಳನ್ನು ಗಾಯಗೊಳಿಸಿದಾಗ, ಆತ್ಮರಕ್ಷಣೆಗಾಗಿ ಗುಂಡು ಹಾರಿಸಬೇಕಾಯಿತೆಂಬ ಸುಳ್ಳು ಕಥೆಯನ್ನು ಕಟ್ಟಿದ್ದಾರೆ. ಇದನ್ನು ಪತ್ರಿಕೆಯವರಾಗಲೀ, ಸಾಮಾನ್ಯ ಜನರಾಗಲೀ ಹಂಬುತ್ತಿಲ್ಲ. ಏಕೆಂದರೆ ಪೋಲೀಸರ ಈ ಕಟ್ಟುಕಥೆ ಅಷ್ಟೊಂದು ಅಸಂಬದ್ಧವಾಗಿದೆ.

ಈ ಪ್ರದೇಶದಲ್ಲಿ ಸಿ. ಪಿ. ಐ. [ಎಂ] ನ ಪ್ರಭಾವ ಹೆಚ್ಚುತ್ತಿರುವುದು, ಕಿಸಾನ್ ಸಭಾದ ಅಡಿಯಲ್ಲಿ ಕೃಷಿ ಕಾರ್ಮಿಕರ, ಗೇಣಿದಾರರ ಧೀರ ಹೋರಾಟಗಳು ನಡೆಯುತ್ತಿರುವುದು ಭೂಮಾಲಕರನ್ನು ಕಂಗೆಡಿಸಿವೆ. ಸರಕಾರವೇ ಅಧಿಕೃತವಾಗಿ ಮಂಜೂರು ಮಾಡಿರುವ ಹಕ್ಕುಗಳನ್ನು ಕೇಳುತ್ತಿರುವ ಗೇಣಿದಾರರು ಗುಂಡೇಟಿಗೆ ಬಲಿಯಾಗ ಬೇಕಾಗಿದೆ. ಬಿಹಾರದ ಕಾಂಗ್ರೆಸ್ [ಐ] ಸರ್ಕಾರ ಪ್ರಧಾನಿ ರಾಜೀವ ಗಾಂಧಿಯವರ 20 ಅಂಶದ ಕಾರ್ಯಕ್ರಮದ ಅನುಸಾರ ಗೇಣಿದಾರರ ಹಕ್ಕುಗಳನ್ನು ರಕ್ಷಿಸುತ್ತಿರುವ ರೀತಿ ಇದಾಗಿದೆ. ○

ಆಂಧ್ರ ಜಿಲ್ಲಾ ಪರಿಷತ್ ಚುನಾವಣೆ

ಸರ್ವಾಧಿಕಾರ ವಿರೋಧಿ ರಂಗಕ್ಕೆ ಕರೆ

ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ ಚುನಾವಣೆಗಳ ಫಲಿತಾಂಶ ಸರ್ವಾಧಿಕಾರಿ ಕಾಂಗ್ರೆಸ್ (ಐ) ನ ಪ್ರಾಬಲ್ಯವನ್ನು ಸಾಬೀತುಪಡಿಸಿದೆ. ಕರ್ನಾಟಕದ ಜೊತೆಯಲ್ಲಿಯೇ ಅಧಿಕಾರಕ್ಕೆ ಬಂದ ತೆಲುಗು ದೇಶಂ ಇದರಿಂದ ಪಾಠ ಕಲಿಯುತ್ತದೆಯೇ ?

ಆಂಧ್ರಪ್ರದೇಶದಲ್ಲಿ ನಡೆಯಲಿರುವ ಮಂಡಲ ಪರಿಷತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳಷ್ಟೇ ಮಹತ್ವವನ್ನು ಪಡೆದುಕೊಂಡಿದೆ. ರಾಜ್ಯದಲ್ಲಿ ಅಧಿಕಾರವನ್ನು ಕಳೆದುಕೊಂಡಿರುವ ಕಾಂಗ್ರೆ ಹೇಗಾದರೂ ಮಾಡಿ ಅಧಿಕಾರಕ್ಕೆ ಬರುವ ಹವಣಿಕೆಯಲ್ಲಿದೆ. ಕೇಂದ್ರ ಮಂತ್ರಿ ವೆಂಗಲರಾವ್–ರಾಜ್ಯ ಸರ್ಕಾರವನ್ನು ಕಾಲ್ಚೆಂಡಾಡುವ ಮಾತನ್ನಾಡುತ್ತಿರುವಾಗಲೇ ಕಾಂಗ್ರೆ ಪಕ್ಷ ಮೀಸಲಾತಿ ಬಗ್ಗೆ ನಡೆದ ಚಳುವಳಿ, ಇತ್ತೀಚೆಗೆ ನಡೆದ ಎನ್. ಜಿ. ಓ. ಗಳ ಚಳುವಳಿಗಳನ್ನು ತನ್ನ ಸಂಕುಚಿತ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದೆ.

ಡಿಸೆಂಬರ್ 20ರಂದು ನಡೆದ ಸಿ.ಪಿ.ಐ. (ಎಂ) ನ ರಾಜ್ಯ ಸಮಿತಿ ಸಭೆಯು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿ ಬಿ.ಜೆ.ಪಿ. ಯನ್ನು ಹೊರತುಪಡಿಸಿ ಎಲ್ಲಾ ಕಾಂಗ್ರೆಯೇತರ ಪಕ್ಷಗಳ ಐಕ್ಯತೆಯನ್ನು ಸಾಧಿಸಲು ತೀರ್ಮಾನಿಸಿದೆ. ಕಾಂಗ್ರೆಸ್ [ಐ] ಮತ್ತು ತೆಲುಗು ದೇಶಂ ಪಕ್ಷಗಳೆರಡನ್ನೂ ಎದುರಿಸುವ ಉದ್ದೇಶದಿಂದ ಮೂರನೇ ರಂಗವನ್ನು ರಚನೆ ಮಾಡಿದರೆ ಅದು ಕಾಂಗ್ರೆಗೆ ಸಹಾಯಕವಾಗುತ್ತದೆಂದು ಸಮಿತಿಯು ಅಭಿಪ್ರಾಯಪಟ್ಟಿದೆ.

ಕಾಂಗ್ರೆಸ್ [ಐ] ಪಕ್ಷವು ಪ್ರತಿಗಾಮಿ ಮತ್ತು ಅಧಿಕಾರಶಾಹೀ ಧೋರಣೆಗಳನ್ನು ಅನುಸರಿಸುತ್ತಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಫರೂಕ್ ಅಬ್ದುಲ್ಲಾರವರನ್ನು ತನ್ನೆಡೆಗೆ ಸೆಳೆದುಕೊಂಡಿದ್ದು, ಕಾಂಗ್ರೆಸ್ [ಎಸ್] ನಾಯಕ ಶರದ್ ಪವಾರ್ ಅವರನ್ನು ತನ್ನ ತೆಕ್ಕೆಯೊಳಗೆ ಸೇರಿಸಿಕೊಂಡಿದ್ದು, ದೇಶ ವಿರೋಧಿಯಾದ ಗೂರ್ಖಾಲ್ಯಾಂಡ್ ಚಳುವಳಿಯ ನಾಯಕ ಸುಭಾಶ್ ಘೀಸಿಂಗ್ ಬಗ್ಗೆ ಮೆದು ನೀತಿ ಅನುಸರಿಸುತ್ತಿರುವುದು ಕಾಂಗ್ರೆನ ಧೋರಣೆಗಳನ್ನು ಎತ್ತಿ ತೋರಿಸುತ್ತದೆ. ಕಾಂಗ್ರೆಯೇತರ ಪಕ್ಷಗಳು ಮತ್ತು ಕಾಂಗ್ರೆಯೇತರ ಸರಕಾರಗಳನ್ನು ತನ್ನ ಇಚ್ಛೆಗೆ ಅನುಸಾರವಾಗಿ ಮಣಿಸುವಂತೆ ಮಾಡಲು ಎಂತಹ ಹೀನ ಕೃತ್ಯಗಳ ಮೂಲಕವಾದರೂ ಸಾಧಿಸಲು ತಯಾರಾಗಿದೆ. ಒಟ್ಟನಲ್ಲಿ ಕಾಂಗ್ರೆ ಪಕ್ಷ ಸರ್ವಾಧಿಕಾರವನ್ನು ದೇಶದಲ್ಲಿ ತರಲು ಪ್ರಯತ್ನಿಸುತ್ತಿದೆ.

ಆದರೆ ದೇಶದ ಜನರಿಗೆ, ಹಾಗೆಯೇ ಆಂಧ್ರ ಪ್ರದೇಶದ ಜನತೆಗೆ ಏಕ ಪಕ್ಷ ಸರ್ವಾಧಿಕಾರದ ಆಡಳಿತದ ಪರಿಣಾಮಗಳು ಚೆನ್ನಾಗಿ ತಿಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆ ಸರ್ವಾಧಿಕಾರದ ಅಪಾಯದ ವಿರುದ್ಧ ವಿಶಾಲ ಐಕ್ಯತೆಯನ್ನು ಸಾಧಿಸುವುದು ಎಲ್ಲಾ ಜನತಂತ್ರವಾದೀ ಶಕ್ತಿಗಳ ಆದ್ಯ ಕರ್ತವ್ಯವಾಗಿದೆ.

ಈ ದೃಷ್ಟಿಯಿಂದ ತೆಲುಗುದೇಶಂ ಪಕ್ಷವು ಸಿ. ಪಿ. ಐ. [ಎಂ], ಸಿ.ಪಿ.ಐ. ಮತ್ತು ಜನತಾ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆಯ ಬಗ್ಗೆ ಚರ್ಚಿಸಲು ಆಹ್ವಾನಿಸಬೇಕೆಂದು ಸಿ.ಪಿ.ಐ. [ಎಂ] ಮನವಿ ಮಾಡಿಕೊಂಡಿದೆ, ಇಂತಹ ಹೊಂದಾಣಿಕೆ ಇಲ್ಲದಿದ್ದ ಕಾರಣದಿಂದಾಗಿಯೇ ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಅಧಿಕಾರಶಾಹೀ ಮತ್ತು ಕೋಮುವಾದೀ ಶಕ್ತಿಗಳು ಮೇಲುಗೈ ಸಾಧಿಸಲು ಸಾಧ್ಯವಾಯಿತೆಂದು ಸಮಿತಿ ತಿಳಿಸಿದೆ. ●

ತಿದ್ದುಪಡಿ

ದಿನಾಂಕ 18-1-87ರ ಸಂಚಿಕೆಯ ಎರಡನೆ ಪುಟದಲ್ಲಿ "ಸಮುದಾಯ ಘಟಕ ಸಹಕಾರ ನೀಡದ್ದರಿಂದ" ಎಂಬುದು "ನೀಡಿದ್ದರಿಂದ" ಎಂದು- "ಎನ್ನುವ ಸಮಯದಲ್ಲಿಯೇ" ಎನ್ನುವುದು "ಎನ್ನುವ ಸಮುದಾಯದಲ್ಲಿಯೇ" ಎಂದು ಮುದ್ರಿತವಾಗಿದೆ' ಇದನ್ನು ಸರಿಯಾಗಿ ಓದಿಕೊಳ್ಳಬೇಕಾಗಿ ವಿನಂತಿ.

ವ್ಯವಸ್ಥಾಪಕರು

ಕಾಂ. ಹರಿಣಿ ಕಕ್ಕೇರಿ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಕಾಂ. ಹರಿಣಿ ಕಕ್ಕೇರಿಯವರು ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯ ಸದಸ್ಯರಾಗಿ ನೇಮಕವಾಗಿದ್ದಾರೆ.

ಇವರು ಜಿಲ್ಲಾ ಉಚಿತ ಕಾನೂನು ಮಂಡಳಿಯ ಸದಸ್ಯರಾಗಿ ಈಗಾಗಲೇ ಕೆಲಸ ನಿರ್ವಹಿಸುತ್ತಿದ್ದಾರೆ.

ಡಿ. ವೈ. ಎಫ್. ಐ. ಗೆ ನಲವತ್ತು ಲಕ್ಷ ಸದಸ್ಯತ್ವ

ಡಿ. ವೈ. ಎಫ್. ಐ. ನ ಹೆಚ್ಚುಳವೇನೆಂದರೆ 1986 ರಲ್ಲಿ 33 ಲಕ್ಷ ಸದಸ್ಯತ್ವ ನೊಂದಾಯಿಸಬೇಕೆಂದು ತೀರ್ಮಾನಿಸಿದ್ದರೆ. 40 ಲಕ್ಷ ಸದಸ್ಯತ್ವ ನೊಂದಾಯಿಸಲ್ಪಟ್ಟಿದೆ. 1987ಕ್ಕೆ 43 ಲಕ್ಷ ನೊಂದಾಯಿಸಬೇಕೆಂದು ತೀರ್ಮಾನಿಸಲಾಗಿದೆ. ಕರ್ನಾಟಕ 30 ಸಾವಿರ ನೊಂದಾಯಿಸುವ ಕೋಟಾ ನೀಡಲಾಗಿದೆ.

1986ರ ಸದಸ್ಯತ್ವದ ಆಧಾರದಲ್ಲಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಅಸ್ಸಾಂ, ತಮಿಳುನಾಡು ಅಥವ ಪಶ್ಚಿಮ ಬಂಗಾಳದಲ್ಲಿ ಮೂರನೇ ರಾಷ್ಟ್ರ ಸಮ್ಮೇಳನ ನಡೆಯಲಿದೆ. ಅದಕ್ಕೆ ಮೊದಲು ಎಲ್ಲಾ ರಾಜ್ಯಗಳ, ಜಿಲ್ಲೆ, ತಾಲ್ಲೂಕ್ ಹಾಗೂ ಕೆಳಗಿನ ಘಟಕಗಳ ಸಮ್ಮೇಳನಗಳನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದೆ.

ಕೊನೆಯ ಹನಿ ರಕ್ತವಿರುವವರೆವಿಗೆ ರಾಷ್ಟ್ರದಿಂದ ಡಾರ್ಜಲಿಂಗ್ ಜಿಲ್ಲೆಯನ್ನು ಗೂರ್ಖಾ ಛಿದ್ರಕಾರಿಗಳಿಗೆ ಬಿಟ್ಟುಕೊಡುವುದಿಲ್ಲವೆಂದು ಡಾರ್ಜಲಿಂಗ್ ಜಿಲ್ಲೆಯ ಡಿ.ವೈ.ಎಫ್.ಐ. ಸಂಗಾತಿಗಳು ಪಣ ತೊಟ್ಟಿರುತ್ತಾರೆ. ಈಗಾಗಲೇ 10 ಜನ ಸಂಗಾತಿಗಳು ಬಲಿಯಾಗಿರುತ್ತಾರೆ. ಅವರ ಕುಟುಂಬಗಳಿಗೆ ಪರಿಹಾರ ಧನವಾಗಿ ಪಶ್ಚಿಮ ಬಂಗಾಳದಲ್ಲಿ ಡಿ.ವೈ.ಎಫ್.ಐ. ಸಂಗಾತಿಗಳು ತಮ್ಮ ರಕ್ತ ಮಾರಿ ಆರ್ಥಿಕ ಮತ್ತು ನೈತಿಕ ಬೆಂಬಲ ನೀಡುತ್ತಿದ್ದಾರೆ. ಎಲ್ಲಾ ರಾಜ್ಯಗಳೂ ನಿಧಿ ಸಂಗ್ರಹಿಸಿ ಕಳುಹಿಸಬೇಕೆಂದು ಕೇಂದ್ರ ಸಮಿತಿ ಕರೆ ನೀಡಿದೆ.

ಎ. ಎನ್. ಸಿ. ಗೆ 75 ವರ್ಷ ತುಂಬಿದೆ. 75ನೇ ವಾರ್ಷಿಕೋತ್ಸವವನ್ನು ರಾಷ್ಟ್ರಾದ್ಯಂತ ಆಚರಿಸಬೇಕು. ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯಪ್ರಿಯ ಹೋರಾಟಗಾರರಿಗೆ ಎಲ್ಲಾ ಆರ್ಥಿಕ ಸಹಾಯ ನೀಡಬೇಕು. 26 ವರ್ಷಗಳಿಂದ ಬಂದಿಖಾನೆಯಲ್ಲಿರುವ ನೆಲ್ಸನ್ ಮಾಂಡೇಲಾರನು ಬಿಡುಗಡೆ ಮಾಡಲು 50 ಲಕ್ಷ ಸಹಿ ಸಂಗ್ರಹ ನಡೆಸಬೇಕು. ದೆಹಲಿಯಲ್ಲಿರುವ ಎ.ಎನ್.ಸಿ. ರಾಯಭಾರಿ ಕಛೇರಿಗೆ ಭಾರತ ಸರ್ಕಾರ ಪೂರ್ಣ ರಾಜಕೀಯ ಮನ್ನಣೆ ನೀಡಬೇಕೆಂದು ಒತ್ತಾಯಿಸಬೇಕು.

ಕೇರಳ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳ ಮುಂಬರುವ ಚುನಾವಣೆಗಳಲ್ಲಿ ಸರ್ವಾಧಿಕಾರಿ, ಜಾತೀಯ ಮತೀಯ ಹಾಗೂ ರಾಷ್ಟ್ರ ವಿರೋಧಿ ಶಕ್ತಿಗಳನ್ನು ಸೋಲಿಸುವ ತೀವ್ರ ರೀತಿಯ ಪ್ರಚಾರಕಾರ್ಯ ನಡೆಸಬೇಕೆಂದು ತೀರ್ಮಾನಿಸಿದೆ.

ಭಾರತ ಐಕ್ಯತೆಯ ದಿನ ಜನವರಿ 25 ರಂದು ಆಚರಿಸಬೇಕೆಂದು ತೀರ್ಮಾನಿಸಲಾಗಿದೆ.

ಪರಿಸರ ಬಿಕ್ಕಟ್ಟು ಹಾಗೂ ಪರಿಸರ ಚಳುವಳಿಗಳು

ನಾಲ್ಕು-ಐದು ವರ್ಷಗಳ ಹಿಂದೆ "ಪರಿಸರ"ದ ಬಗ್ಗೆ ಯಾರಾದರೂ ಕನ್ನಡದಲ್ಲಿ ಬರೆಯಬೇಕಾದರೆ ಬಹುಶ. ಆ ಪದದ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕಾಗುತ್ತಿತ್ತು. ಆದರೆ ಇಂದು ನಮ್ಮ ಪತ್ರಿಕೆಗಳಲ್ಲಿ, ಸರ್ಕಾರಿ ಮತ್ತು ಇತರ ಪ್ರಚಾರ ಮಾಧ್ಯಮಗಳಲ್ಲಿ ದಿನೇ ದಿನ ಪರಿಸರ ಸಮಸ್ಯೆ ಸಂಬಂಧಿತ ಸುದ್ದಿ, ವರದಿ, ವಿಶ್ಲೇಷಣೆ ಸಾಕಷ್ಟು ಗದ್ದಲ ಎಬ್ಬಿಸುತ್ತಿದೆ. ಭೂಪಾಲ್ ಅನಿಲ ದುರಂತ, ಚೆರ್ನೊಬಿಲ್, ಯೂರೋಪಿನ ಆಮ್ಲ-ಮಳೆ, ಕೈಗಾ ಅಣು ಸ್ಥಾವರದ ಪರ-ವಿರುದ್ಧ ಚರ್ಚೆ ಇವೆಲ್ಲ ನಮ್ಮ ಪತ್ರಿಕೆಗಳಲ್ಲಿ. ಸಾರ್ವಜನಿಕ ವೇದಿಕೆಗಳಲ್ಲಿ ಜನಮಾನಸವನ್ನು ಕದಡುತ್ತಿದೆ. "ಪರಿಸರ ಬಿಕ್ಕಟ್ಟಿ"ನ ನಿರಾಶಾದಾಯಕ ಚಿತ್ರವನ್ನು ಇವು ಕೊಡುತ್ತಿವೆ. ಪರಿಸರ ಸಮಸ್ಯೆ ಇಷ್ಟು ಗಂಭೀರವಾಗಿದೆಯೆ ? ಇದ್ದರೆ ಅದಕ್ಕೆ ಕಾರಣಗಳೇನು ? ಪರಿಹಾರಗಳೇನು ?

ಪರಿಸರ ಬಿಕ್ಕಟ್ಟು ಎಂದರೇನು ?

ಮೊದಲನೆಯದಾಗಿ ಪರಿಸರ ಸಮಸ್ಯೆ ಜಗತ್ತಿನ ಮಟ್ಟದಲ್ಲಿ "ಬಿಕ್ಕಟ್ಟು"ಎನ್ನಬಹುದಾದ ಮಟ್ಟ ಮುಟ್ಟಿದೆಯೆಂಬುದು ನಿಜ. ಈ ಬಿಕ್ಕಟ್ಟಿನ ಕೆಲವು ಸೂಚನೆಗಳೆಂದರೆ-ಮಾನವ ಮತ್ತು ಇತರ ಜೀವ ಜಗತ್ತಿಗೆ ಮಾರಕವಾಗಬಹುದಾದ ದಿನೇ ದಿನೇ ಹೆಚ್ಚುತ್ತಿರುವ ವಾಯು, ನೀರು ಮಾಲಿನ್ಯ, ಪ್ರಾಕೃತಿಕ ಸಂಪನ್ಮೂಲಗಳು ಬರಿದಾಗುತ್ತಿರುವುದು ಮತ್ತು ಪ್ರಕೃತಿಯ ಮೇಲೆ ಬದಲಿಯಾಗದ ದುಷ್ಪರಿಣಾಮಗಳು ಕೈಗಾರಿಕಾ ಚಟುವಟಿಕೆ, ಇಂಧನಗಳ ಸುಡುವಿಕೆ ಮುಂತಾದವುಗಳಿಂದ ಗಾಳಿಯಲ್ಲಿ ತೇಲಾಡುವ ಅಪಾಯಕಾರಿ ರಾಸಾಯನಿಕಗಳ ಪ್ರಮಾಣ ಬಹಳಷ್ಟು ಹೆಚ್ಚಿದೆ. ಪರಮಾಣು, ರಾಸಾಯನಿಕ ಮತ್ತಿತರ ಮಾರಕಾಸ್ತ್ರಗಳ ಅಭಿವೃದ್ಧಿ, ಪರೀಕ್ಷೆ ತಮ್ಮ "ಕಾಣಿಕೆಯ ವಾತಾವರಣದ ಮಾಲಿನ್ಯಕ್ಕೆ ಸಲ್ಲಿಸುತ್ತಿವೆ. ಅಮೇರಿಕಾದ ಒಂದು ದೇಶದಲ್ಲೇ ಸುಮಾರು 20 ಕೋಟಿ ಟನ್ನು ಕಲ್ಮಶಗಳು ಗಾಳಿಗೆ ಒಂದು ವರ್ಷದಲ್ಲಿ ಬಿಡುಗಡೆಯಾಗುತ್ತವೆ. ಹೆಚ್ಚುತ್ತಿರುವ ಜನಸಂಖ್ಯೆಯಿಂದ ಮತ್ತು ಕೈಗಾರಿಕಾ ಮತ್ತಿತರ ಉಪಯೋಗಗಳಿಂದ ನೀರಿನ ಮಾಲಿನ್ಯ ಸಹ ಹೆಚ್ಚುತ್ತಿದ್ದು ಸಾಕಷ್ಟು ಪ್ರಮಾಣದಲ್ಲಿ ಶುದ್ಧ ನೀರಿನ ಅಭಾವದ ಸಮಸ್ಯೆ ತೀವ್ರವಾಗುತ್ತಿದೆ. ನೀರಿನ ಮಾಲಿನ್ಯ ಮೀನು ಮತ್ತಿತರೆ ಜೀವ ಜಗತ್ತಿನ ನಾಶಕ್ಕೂ ಕಾರಣವಾಗುತ್ತಿದೆ. ಹೆಚ್ಚಿನ ದೇಶಗಳಲ್ಲಿನ ವಸತಿ ಸಮಸ್ಯೆ, ಬಡತನ ಇತ್ಯಾದಿ ವಾಯು, ಜಲ ಮಾಲಿನ್ಯದ ಪರಿಣಾಮವನ್ನು ಇನ್ನಷ್ಟು ಹೆಚ್ಚಿಸಿದೆ. ಒಟ್ಟಾರೆ ಮಾನವ ಆರ್ಥಿಕ ಚಟುವಟಿಕೆಗಳಿಂದುಂಟಾಗುವ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ವಾತಾವರಣದಲ್ಲಿ ಹೆಚ್ಚುತ್ತಿದೆ. ಕಾರ್ಬನ್ ಡೈಆಕ್ಸೈಡನ್ನು ಆಮ್ಲಜನಕವಾಗಿ ಪರಿವರ್ತನೆ ಮಾಡಲು ಜಗತ್ತಿನ ಒಟ್ಟಾರೆ ಸಸ್ಯ ಜಗತ್ತಿಗೆ ಇರುವ ಸಾಮರ್ಥ್ಯವನ್ನು ಮೀರುವ ಹಂತ ತಲುಪಿದೆ. ಈ ಸಾಮರ್ಥ್ಯವನ್ನು ಮೀರಿದರೆ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಏರಿದಂತೆ ಭೂಮಿಯ ಉಷ್ಣತೆ ಹೆಚ್ಚಿ, ಭೀಕರ ಪರಿಣಾಮಗಳು ತಲೆದೋರುವ ಸಾಧ್ಯತೆ ಇದೆ. ಇದೇ ರೀತಿ ಭೂಮಿಯನ್ನು ಹಾನಿಕಾರಕ ವಿಕಿರಣಗಳಿಂದ ತಡೆಗಟ್ಟಿ ಜೀವಯೋಗ್ಯ ವಾತಾವರಣವನ್ನು ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುವ ಓರ್ಝೋನ್ ಹೊದಿಕೆಯಲ್ಲಿ "ತೂತು" ಗಳಾಗುವ ಅಪಾಯ ಸಹ ದೂರವಿಲ್ಲ. ಕಲ್ಲಿದ್ದಲು, ಪೆಟ್ರೋಲು, ಮರಮಟ್ಟು ಮುಂತಾದ ಇಂಧನಗಳು ಕಬ್ಬಿಣ ಉಪಯುಕ್ತ ಪ್ರಮುಖ ಖನಿಜಗಳು ಮುಂತಾದ ಸಂಪನ್ಮೂಲಗಳು ಬರಿದಾಗುವ ಸೂಚನೆ ಕಾಣುತ್ತಿದೆ. ಅರಣ್ಯ ನಾಶದಿಂದಾಗಿ ಮಳೆ ವಾತಾವರಣದಲ್ಲಿ ಏರುಪೇರುಗಳು ಹೆಚ್ಚುಕಡಿಮೆ ಶಾಶ್ವತವಾಗಬಹುದು. ವಿವಿಧ ಕಾರಣಗಳಿಂದ ಭೂ ಸಾರದ ನಾಶದಿಂದಾಗಿ ಮರುಭೂಮೀಕರಣ, ಕೃಷಿಯೋಗ್ಯ ಭೂಮಿಯ ಅಭಾವ ಸಹ ತೀವ್ರ ಸಮಸ್ಯೆಯಾಗಿದೆ.

ಈ ಜಗತ್ತು, ಈ ಭೂಮಿ
ಈ ಮಾನವ
ಉದಿಸಿದಂದಿನಿಂದ
ನಮ್ಮ ಪರಿಸರ
ಬದಲಾಗುತ್ತಲೆ ಇದೆ.
ಈ ಪರಿಸರ ಬದಲಾವಣೆ
'ಪರಿಸರ ಬಿಕ್ಕಟ್ಟು'
ಆಗಿದೆ ಈಗ.
ಅದರ ಫಲವೇ
"ಪರಿಸರ ಚಳುವಳಿಗಳು"
ಇವರ ವಾದದಲ್ಲಿ
ಕಾಳೆಷ್ಟು, ಜೊಳ್ಳೆಷ್ಟು ?
ಎಷ್ಟು ಜನಪರ
ಎಷ್ಟು ಜನವಿರೋಧಿ ?
ವಿಂಗಡಿಸಲು ಯತ್ನಿಸಿದ್ದಾರೆ
ಶರತ್ ಚಂದ್ರ.

ಪರಿಸರ ಬಿಕ್ಕಟ್ಟು ಏಕೆ ?

ಇದು ಜಗತ್ತಿನ ಪರಿಸರ ಸಮಸ್ಯೆಯ ಒಟ್ಟಾರೆ ಚಿತ್ರಣವಾದರೂ-ಪ್ರದೇಶ, ರಾಜಕೀಯ-ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳ ಮೇಲೆ ಹೊಂದಿಕೊಂಡು ಸಮಸ್ಯೆಯ ತೀವ್ರತೆ ಬೇರೆ ಬೇರೆ ಪ್ರಮಾಣದಲ್ಲಿದೆ. ಇದಕ್ಕೆ ಪರಿಹಾರ ಹುಡುಕಲು ಈ ಬಿಕ್ಕಟ್ಟಿಗೆ ಕಾರಣಗಳೇನು ? ಎಂದು ತಿಳಿಯಲು ಪ್ರಯತ್ನಿಸಬೇಕು.

ಜಗತ್ತಿನ ಹೆಚ್ಚುತ್ತಿರುವ ಜನಸಂಖ್ಯೆಯ ವಸತಿ, ಆಹಾರ ಮತ್ತಿತರ ಅಗತ್ಯಗಳ ಪೂರೈಕೆಗೆ ಬೇಕಾದ ಆರ್ಥಿಕ ಚಟುವಟಿಕೆ ಹೆಚ್ಚಿದೆ. ಇದರ ನೇರ ಪರಿಣಾಮ- ಪ್ರಕೃತಿಯಲ್ಲಿ ಆಗುತ್ತಿರುವ ತೀವ್ರತರ ಬದಲಾವಣೆ-ಈಗಿನ ಬಿಕ್ಕಟ್ಟಿಗೆ ಒಂದು ಪೂರಕ ಕಾರಣ' - ಈ ಬದಲಾವಣೆ ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಆಗುತ್ತಿರುವ ಬದಲಾವಣೆಯ ಮಟ್ಟ ಮೀರಿದೆ ಎಂಬುದು. ಉದಾಹರಣೆಗೆ ಜಗತ್ತಿನ ವಾತಾವರಣದ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ 10,000 ಕೋಟಿ ಟನ್ನುಗಳಾದರೆ ಕೈಗಾರಿಕಾ ಮತ್ತಿತರ ಇಂಧನಗಳ ಸುಡುವಿಕೆಯಿಂದ ಮಾತ್ರವೇ 1000 ಕೋಟಿ ಟನ್ನುಗಳಷ್ಟು ಕಾರ್ಬನ್ ಡೈಆಕ್ಸೈಡ್ ಬಿಡುಗಡೆಯಾಗುತ್ತಿದೆ. ಈಗ ನಡೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ರಾಂತಿಯಿಂದಾಗಿ ಪ್ರಕೃತಿಯನ್ನು ನಮ್ಮ ಅಗತ್ಯಗಳಿಗೆ ದುಡಿಸಿಕೊಳ್ಳುವ, ಉಪಯೋಗಿಸುವ, ನಿಯಂತ್ರಿಸುವ ಮನುಕುಲದ ಶಕ್ತಿ ಅಪಾರವಾಗಿ ಹೆಚ್ಚಿದೆ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ತನ್ನಷ್ಟಕ್ಕೆ ಪರಿಸರ ಬಿಕ್ಕಟ್ಟಿಗೆ ಕಾರಣವಾಗಲಾರದು. ನಿಜವಾಗಿಯೂ ಹೇಳಬೇಕೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರಮಾಲಿನ್ಯ ತಡೆಗಟ್ಟುವ ಕ್ರಮಗಳನ್ನು ಹುಡುಕುವುದರಲ್ಲೂ ಅಷ್ಟೇ ಯಶಸ್ವಿಯಾಗಬಲ್ಲವು. ನಿಜವಾದ ಕಾರಣ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಂಡವಾಳ ಶೇಖರಣೆ ಮತ್ತು ಲಾಭ ಹೆಚ್ಚಿಸುವ ಏಕಮಾತ್ರ ಉದ್ದೇಶಕ್ಕೆ ಪ್ರಕೃತಿಯನ್ನು ಎರ್ರಾಬಿರ್ರಿಯಾಗಿ ಲೂಟಿ ಮಾಡುವ ಧೋರಣೆಯಿಂದ. ಪ್ರಕೃತಿಯನ್ನು ಬೇಕಾದ್ದನ್ನು ಬೇಕಾದಷ್ಟು ಕೊಡುವ ಕಾಮಧೇನು ಎಂದು ಬಗೆದು ಅದನ್ನೆ ಬಂಡವಾಳ ಮಾಡಿಕೊಳ್ಳುವ, ದುಷ್ಪರಿಣಾಮಗಳನ್ನು ಲೆಕ್ಕಿಸದೆ ಅದನ್ನು ಹೀರುವ ಧೋರಣೆಯಿಂದ. ಜಗತ್ತಿನ ಮೂರನೇ ಒಂದು ಭಾಗದ ಸಮಾಜವಾದಿ ಜಗತ್ತನ್ನು ಬಿಟ್ಟರೆ ಸಾಮ್ರಾಜ್ಯಶಾಹಿ ಮತ್ತು ಅದರ ಕರಾಳ ಛಾಯೆಯಲ್ಲಿ ನರಳುತ್ತಿರುವ ಮೂರನೆಯ ಜಗತ್ತಿನಲ್ಲಿ ಈ ಧೋರಣೆ ಜಾರಿಯಲ್ಲಿದೆ ಇದೇ ಪರಿಸರ ಬಿಕ್ಕಟ್ಟಿನ ಮೂಲ ಕಾರಣ. ಈ ಬಿಕ್ಕಟ್ಟು ಇತ್ತೀಚೆಗೆ ತೀವ್ರವಾಗುತ್ತಿರುವುದು ಪ್ರಕೃತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಪುನಃ ಬದಲಾಯಿಸಲು ಸಾಧ್ಯವಾಗದ ರೀತಿಯಲ್ಲಿ ಬದಲಾವಣೆ ಹೊಂದುತ್ತಿರುವುದರಿಂದ (ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ). ಈ ಪ್ರಮಾಣದಲ್ಲಿ ಪ್ರಕೃತಿಯನ್ನು ಬದಲಾಯಿಸುವಾಗ ದುಷ್ಪರಿಣಾಮಗಳಾಗದಂತೆ ನೋಡಿಕೊಳ್ಳುವ ಕ್ರಮ (ಇವೂ ಸಹ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಯಿಂದ ಸಾಧ್ಯವಿದೆ) ಗಳನ್ನು ತೆಗೆದುಕೊಳ್ಳುವ ಸಾಮಾಜಿಕ ಜವಾಬ್ದಾರಿ ಸಾಮ್ರಾಜ್ಯಶಾಹಿಗೆ, ಅದರ ಉಪಕರಣಗಳಾದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಇರದಿರುವುದು ಉಚ್ಚಕುಲದ ಭೋಗಕ್ಕಾಗಿ ಮತ್ತು ಯಾವುದೇ ದೂರದೃಷ್ಟಿಯ ಸಾಮಾಜಿಕ ಯೋಜನೆಯಿಲ್ಲದ, ಪ್ರಾಕೃತಿಕ ಸಂಪತ್ತಿನ ಅರಾಜಕ ಬಳಕೆ ಪರಿಸರ ಬಿಕ್ಕಟ್ಟಿಗೆ ಎಡೆಗೊಡುತ್ತದೆ.

ಆದ್ದರಿಂದ ನಿಜವಾಗಿಯೂ ಪರಿಸರ ಬಿಕ್ಕಟ್ಟು ವಿಜ್ಞಾನ, ತಂತ್ರಜ್ಞಾನದ ಕ್ರಾಂತಿಯ ಅವಧಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟಿನ ಹೊಸ ರೂಪ.

ಇದಕ್ಕೆ ಪ್ರತಿಯಾಗಿ ಸಮಾಜವಾದಿ ದೇಶದಲ್ಲಿ ಪರಿಸರ ಸಮಸ್ಯೆಯನ್ನು ಗಣನೆಗೆ ತೆಗೆದುಕೊಂಡು, ಪ್ರಕೃತಿಯ ಸಂರಕ್ಷಣೆ, ಅದರ ಮೇಲೆ ಆರ್ಥಿಕ ಚಟುವಟಿಕೆಗಳಿಂದಾಗುವ ದುಷ್ಪರಿಣಾಮಗಳ ತಡೆ ಮತ್ತು ಸಂಪನ್ಮೂಲಗಳ ಜಾಗರೂಕ ಬಳಕೆ ಎಲ್ಲಾ ಸಾಮಾಜಿಕ ಪ್ರಗತಿ ಯೋಜನೆಗಳ ಭಾಗವಾಗಿರುವುದು, ಸಮಾಜವಾದಿ ವ್ಯವಸ್ಥೆಯ ಉತ್ಕೃಷ್ಟತೆಯನ್ನು ತೋರಿಸುತ್ತದೆ.

ಬಂಡವಾಳಶಾಹಿ ಹಾಗೂ ಸಮಾಜವಾದಿ ದೇಶಗಳಲ್ಲಿ

ಜಗತ್ತಿನ ವಾಯು ಮಾಲಿನ್ಯದ 63% ಇಂದು ಕೆಲವೇ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಕೊಡುಗೆ (ಜನ ಸಂಖ್ಯೆ 25% ಕ್ಕಿಂತಲೂ ಕಡಿಮೆ). ಅಮೇರಿಕದ ಪರಿಸರ ತಜ್ಞನೊಬ್ಬ,ಸರಾಸರಿ ಅಮೇರಿಕನ್ ಪ್ರಜೆ, ಸರಾಸರಿ ಭಾರತೀಯ ಪ್ರಜೆಗಿಂತ 50 ಪಟ್ಟು ಹೆಚ್ಚು ಪರಿಸರ ಮಾಲಿನ್ಯ ಉಂಟು ಮಾಡುತ್ತಾನೆ ಎಂದು ಅಂದಾಜು ಮಾಡಿದ್ದಾರೆ. 20 ಕೋಟಿ ಟನ್ನು ಕಲ್ಮಶಗಳನ್ನು ಅಮೇರಿಕಾ ಒಂದರಲ್ಲೇ ವಾರ್ಷಿಕವಾಗಿ ಗಾಳಿಗೆ ಸೇರಿಸಲಾಗುತ್ತಿದೆ, ಬಂಡವಾಳಶಾಹಿದೇಶಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ಅಲ್ಲಿನ ಕಾನೂನುಗಳಲ್ಲಿ "ತೂತು"ಗಳನ್ನು ಹುಡುಕಿ ಕೊಳ್ಳುತ್ತವೆ. ಹಲವು ಬಾರಿ ಮಾಲಿನ್ಯ – ನಿವಾರಣಾ ಕ್ರಮಗಳು, ಅದನ್ನು ಮಾಡದಿದ್ದರೆ ಕಾನೂನು ವಿಧಿಸುವ ಜುಲ್ಮಾನೆಗಿಂತ ಬಹಳ ದುಬಾರಿಯಾಗಿರುವುದರಿಂದ ಆರಾಮವಾಗಿ ಜುಲ್ಮಾನೆ ತೆರುವ ಹೆಚ್ಚು "ಲಾಭದಾಯಕ" ಮಾರ್ಗ ಹಿಡಿಯುತ್ತವೆ. ಫೋರ್ಡ್ ಕಂಪನಿ ಕಾರುಗಳ ಕಲ್ಮಶದ ಮೇಲೆ ವಿಧಿಸುವ ಮಿತಿಯ ಬಗೆಗಿನ ಕಾನೂನಿನ ಜಾರಿಗೆ ಬರುವ ತಾರೀಕನ್ನು 8–10 ವರ್ಷಗಳವರೆಗೆ ಮುಂದೆ ತಳ್ಳುತ್ತಾ ಬಂದಿವೆ. ಅಪಾಯಕಾರಿ ಕೈಗಾರಿಕೆಗಳನ್ನು ಇಂತಹ ಕಾನೂನುಗಳಿಲ್ಲದ ತೃತಿಯ ಜಗತ್ತಿನ ದೇಶಗಳಿಗೆ ರವಾನಿಸುವುದು ಈ ಸಂಸ್ಥೆಗಳ ಇನ್ನೊಂದು ವಿಧಾನ. ಈ ದೇಶಗಳಲ್ಲಿ ನಿಷೇಧಿತವಾಗಿರುವ ರಾಸಾಯನಿಕಗಳನ್ನೂ "ರಫ್ತು" ಮಾಡಲಾಗುತ್ತಿದೆ. ಇದನ್ನು ನಿಷೇಧಿಸುವ ಕಾನೂನುಗಳಿಲ್ಲ ಎನ್ನುವುದು ಗಮನಾರ್ಹ.

ಸಮಾಜವಾದಿ ದೇಶಗಳಲ್ಲೂ ಪರಿಸರ ಸಮಸ್ಯೆ ಇದೆ.ಆದರೆ ಅದು"ಬಿಕ್ಕಟ್ಟು" ಆಗಿಲ್ಲ. ಪರಿಸರ ರಕ್ಷಣೆಯ ಅಗತ್ಯದ ಅರಿವು ಮೊದಲಿನಿಂದಲೂ ಇತ್ತು. ಗಾಳಿಯಲ್ಲಿ ಅತ್ಯಂತ ಹೆಚ್ಚು ಇರಬಹುದಾದ ಪ್ರಮಾಣ [Maximum permissible concentration] ದ ಮಿತಿಗಳನ್ನು ರಾಸಾಯನಿಕಗಳಿಗೆ 30 ರ ದಶಕದಲ್ಲೇ ಸೋವಿಯತ್ ಒಕ್ಕೂಟದಲ್ಲಿ ಜಾರಿಗೆ ತಗಲಾಗಿತ್ತು. ಹಲವು ರಾಸಾಯನಿಕಗಳಿಗೆ ಈ ಮಿತಿ ಅಮೇರಿಕಾದ ಮಿತಿಗಿಂತ ಬಿಗಿಯಾಗಿದೆ. ಈ ಮಿತಿ ಗಂಧದ ಡೈಆಕ್ಸೈಡ್‌ಗೆ ರಶ್ಯಾದಲ್ಲಿ 0.05 ಮಿಲಿ ಗ್ರಾಂ (ಪ್ರತಿ ಘನ ಮಿಟರ್) ಇದ್ದರೆ, ಅಮೇರಿಕಾದಲ್ಲಿ 0.3 ಮಿಲಿ ಗ್ರಾಂ ಇದೆ. 1980 ರಿಂದ ಕೈಗಾರಿಕೆಗಳಿಗೆ ರಾಸಾಯನಿಕ ವಿಸರ್ಜನೆಯ ಪ್ರಮಾಣದ ಮೇಲೆನೇ ಮಿತಿ ಹಾಕುವ ಕಾನೂನೂ ಜಾರಿಗೆ ಬಂದಿದೆ (Maximum possible discharge)

ಜಲಮಾಲಿನ್ಯ ನಿವಾರಣೆಗೆ ಪ್ರಾಮುಖ್ಯತೆ ಕೊಡಲಾಗಿದೆ. ಪ್ರತಿ ವರ್ಷ 1000 ಜಲಮಾಲಿನ್ಯ – ನಿವಾರಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಒಕ್ಕೂಟದ ಮುಖ್ಯ ಜಲ ಮೂಲಗಳಾದ ವೋಲ್ಗಾ, ಅಝೋವ್, ಕಪ್ಪು ಸಮುದ್ರಗಳಿಗೆ ಕಲ್ಮಶಗಳನ್ನು ಬಿಡುವುದನ್ನು ಸದ್ಯದಲ್ಲಿ, ಪೂರ್ತಿಯಾಗಿ ನಿಲ್ಲಿಸಲು ಯೋಜಿಸಲಾಗಿದೆ.

ಇತ್ತೀಚೆಗೆ ಹಲವಾರು ಅಮೇರಿಕನ್ ಮ್ಯಾಗಝೀನ್‌ಗಳು ರಶ್ಯಾದ ಚೆನೋ೯ಬಿಲ್‌ನಲ್ಲಿ ಹಾನಿಗೊಳಗಾದ ಅಣುಸ್ಥಾವರದ್ದು ಎನ್ನಲಾದ ಫೋಟೋಗಳನ್ನು ಪ್ರಕಟಿಸಿದವು. ಆದರೆ ಅದು ನಿಜವಾಗಿ ಯುಗೋಸ್ಲಾವಿಯಾದ ಒಂದು ಕಾರ್ಖಾನೆಯ ಫೋಟೋ !

ಇಲ್ಲಸ್ಟ್ರೇಟೆಡ್ ವೀಕ್ಲಿಯ ಹಿಂದಿನ ಸಂಪಾದಕ ಎಂ. ವಿ. ಕಾಮತ್.
ಉದಯವಾಣಿಯಲ್ಲಿ "ಅಮೇರಿಕನ್ ಸರ್ಕಾರ ಮತ್ತು ಸುಳ್ಳು ವರದಿಯಿಂದ"

ನಮ್ಮ ದೇಶದ ಪರಿಸರ ಸಮಸ್ಯೆ

ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ, ಕೈಗಾರಿಕೆಗಳಲ್ಲಿ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲಿದ್ದಂತಹ ವಾಯು ಮಾಲಿನ್ಯ ಇಲ್ಲದಿದ್ದರೂ, ಅರಣ್ಯನಾಶದ ಸಮಸ್ಯೆ ಅತೀ ಗಂಭೀರ ಪರಿಸ್ಥಿತಿಯನ್ನು ಮುಟ್ಟಿದೆ. ಉತ್ತಮ ಹವಾಮಾನಕ್ಕೆ, ನೀರಿನ ಹಾಗೂ ಭೂಮಿಯ ಒಳಿತಿಗಾಗಿ ಅರಣ್ಯ ಅತೀ ಅವಶ್ಯಕತೆ ಎಂದು ತಿಳಿದಿರುವ ಸಂಗತಿ. ಕೃಷಿಯು ಅರಣ್ಯವನ್ನು ಅವಲಂಬಿಸಿರುತ್ತದೆ. ಅರಣ್ಯದ ವಿಸ್ತಾರ 10 ಶೇಕಡಕ್ಕಿಂತ ಕಡಿಮೆ ಆದಲ್ಲಿ ದೇಶವು ಮರಳುಗಾಡಾಗುವ ಪರಿಸ್ಥಿತಿಬರುತ್ತದೆ. ಈಗ ನಮ್ಮ ದೇಶದಲ್ಲಿ ಕೇವಲ 11 ಶೇಕಡದಷ್ಟು ಮಾತ್ರ ಅರಣ್ಯ ಇರುತ್ತದೆ. ನಮ್ಮ ದೇಶದ ಒಟ್ಟು 328 ಮಿ. ಹೆಕ್ಟೇರುಗಳಲ್ಲಿ ಕೇವಲ 35 ಮಿ. ಹೆಕ್ಟೇರುಗಳಷ್ಟು ಅರಣ್ಯ ಇರುತ್ತದೆ. ಪ್ರತಿ ವರ್ಷ 1.5 ಮಿ. ಹೆಕ್ಟೇರುಗಳಷ್ಟು ಅರಣ್ಯ ನಾಶ ಆಗುತ್ತಿದೆ. ಅಂದರೆ ಇದೇ ರೀತಿಯಲ್ಲಿ ಅರಣ್ಯ ನಾಶವಾದರೆ ಮುಂದಿನ 10 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಅರಣ್ಯವೇ ಇರುವುದಿಲ್ಲ.

ಬ್ರಿಟೀಷರ ಆಡಳಿತ ಕಾಲದಲ್ಲಿ, ಅದರಲ್ಲೂ ಮಹಾಯುದ್ಧಗಳ ಕಾಲದಲ್ಲಿ ನಮ್ಮ ದೇಶದ ಅರಣ್ಯ ನಾಶ ಅತ್ಯಂತ ದೊಡ್ಡ ಮಟ್ಟದಲ್ಲಾಯಿತು. ತೀರ ಇತ್ತೀಚಿನವರೆಗೆ ಅರಣ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಉಪಯೋಗಿಸಿ, ಅರಣ್ಯವನ್ನು ಸಂರಕ್ಷಿಸಿ, ಬೆಳೆಸುವ ಸರಕಾರದ ಯಾವ ನೀತಿಯೂ ಇದ್ದಿರಲಿಲ್ಲ. ಇಂದಿಗೂ ಅನೇಕ ರಾಜ್ಯಗಳಲ್ಲಿ ಅರಣ್ಯ ಉತ್ಪತ್ತಿಯು ಸರಕಾರದ ಒಟ್ಟು ಉತ್ಪತ್ತಿಯ ಮುಖ್ಯ ಅಂಶವಾಗಿರುತ್ತದ. ಅರಣ್ಯ ಕಾಂಟ್ರ್ಯಾಕ್ಟರುಗಳ ಭ್ರಷ್ಟಾಚಾರ ಅರಣ್ಯ ನಾಶಕ್ಕೆ ಒಂದು ಮುಖ್ಯ ಕಾರಣ. ಅವೈಜ್ಞಾನಿಕ ರೀತಿಯಲ್ಲಿ ಮರಗಳನ್ನು ಕೆಡವುದು, ಲಂಚ ಕೊಟ್ಟು, ತಮಗೆ ಅನುಮತಿ ಕೊಟ್ಟದ್ದಕ್ಕಿಂತ ಎಷ್ಟೋ ಪಾಲು ಹೆಚ್ಚು ಅರಣ್ಯ ನಾಶ ಮಾಡುವುದು, ಇವುಗಳಲ್ಲಿ ರಾಜಕೀಯವಾಗಿ ಪ್ರಬಲವಾಗಿರುವ ಬಂಡವಾಳಶಾಹೀ ಹಾಗೂ ಭೂಮಾಲಕ ವರ್ಗಗಳ ಕುಯುಕ್ತಿ ಇವೆಲ್ಲ ಅರಣ್ಯನಾಶದ ಮುಖ್ಯ ಕಾರಣಗಳು.

ಅರಣ್ಯಗಳು ಅನೇಕ ಜನರ ಬದುಕಿನ ಆಸರೆ ಆಗಿರುತ್ತದೆ. ಕೃಷಿಗಾಗಿ, ಅರಣ್ಯೋತ್ಪತ್ತಿಗಾಗಿ ಜನರು, ಮುಖ್ಯವಾಗಿ ಬುಡಕಟ್ಟಿನ ಜನರು ಅರಣ್ಯವನ್ನು ಆಶ್ರಯಿಸಿರುತ್ತಾರೆ. ಇದು ಈ ಜನರ ಮೂಲಭೂತ ಹಕ್ಕಾಗಿರುತ್ತದೆ. ಅರಣ್ಯ ನಾಶ ಆದಾಗ ಈ ಜನರು ನಿರ್ಗತಿಕರಾಗುತ್ತಾರೆ. ಇದನ್ನು ಗಣನೆಗೆ ತೆಗದುಕೊಳ್ಳದೇ, ಕೈಗಾರೀಕರಣಕ್ಕಾಗಿ ಅರಣ್ಯವನ್ನು ಸಪಾಯಿ ಮಾಡಲಾಗುತ್ತಿದೆ ಅಂದರೆ, ಅರಣ್ಯದ ಉಪಯೋಗವನ್ನು ವೈಜ್ಞಾನಿಕ ರೀತಿಯಲ್ಲಿ ಮಾಡಸೇ, ಮಾರುಕಟ್ಟೆಯ ಲಾಭಶಕ್ತಿಯ ಸೊತ್ತನ್ನಾಗಿ ಮಾಡಲಾಗಿದೆ. ಇದರಿಂದ ಅಂದರೆ ಬಡ ಜನರನ್ನು ಅವರ ಜೀವನೋಪಾಯದಿಂದ ವಂಚಿಸಿ (ಅವರಿಗೆ ಬೇರೆ ಯಾವ ಮಾರ್ಗವನ್ನೂ ತೋರದೆ) ಕೈಗಾರೀಕೊದ್ಯಮಿಗಳಿಗೂ, ಪಟ್ಟಣದ ಶ್ರೀಮಂತರಿಗೂ, ಲಾಭ ಬರುವಂತೆ ಅನುವು ಮಾಡಿಕೊಡಲಾಗಿದೆ. ಅರಣ್ಯ ಇಲಾಖೆ, ದಾಂಡೇಲಿ ಪೇಪರ್ ಮಿಲ್ಲಿಗೆ ಟನ್ ಒಂದಕ್ಕೆ 15–20 ರೂ. ಯಂತೆ ಬೊಂಬನ್ನು ಮಾರಿದರೆ, ಬಡ ರೈತ ಟನ್ ಒಂದಕ್ಕೆ 1000 ರೂಗಳನ್ನಾದರೂ ಕೊಡಬೇಕಾಗುತ್ತದೆ. ಸಾಮಾಜಿಕ ಅರಣ್ಯೀಕರಣ [Social forestry] ನಮ್ಮ ಬಂಡವಾಳಶಾಹಿಯ ಕೆಟ್ಟ ಶಕ್ತಿಗೆ ಒಂದು ಉದಾಹರಣೆ – ಹಳ್ಳಿಯ ಜನರ ಉಪಯೋಗಕ್ಕಾಗಿ, ಉರುವಲಿಗಾಗಿ ಈ ಯೋಜನೆ ಪ್ರಾರಂಭವಾಯಿತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಈ ಕಾಡುಗಳಲ್ಲಿ ಕೇವಲ ನೀಲಗಿರಿ ಮರದಂತ ಮರಗಳೇ ಬೆಳಸಲ್ಪಟ್ಟು, ಬಂಡವಾಳಶಾಹೀಯ ಕಾರ್ಖಾನೆಗೆ ಕಚ್ಚಾಮಾಲಾಗಿ ಹೋಗುತ್ತಿವೆ. ಹಳ್ಳಿಯವರಿಗಿದರಿಂದೇನೂ ಲಾಭ ಆಗಲಿಲ್ಲ. ಸಾಮ್ರಾಜ್ಯಶಾಹಿಗಳ ಹಣ, ವಿವಿಧ ರೂಪದಲ್ಲಿ ಈ ಯೋಜನೆಗೆ ಹರಿದು ಬರುತ್ತಿರುವುದನ್ನು ನೋಡಿದರೆ, ಇದು ಅನೇಕ ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ.

ಅರಣ್ಯ ಬೆಳೆಸುವ ಯೋಜನೆ (Aforestation) ಕತೆ ಇನ್ನೂ ವಿಚಿತ್ರವಾಗಿದೆ. ಅರಣ್ಯ ಬೆಳೆಸುವ ಯೋಜನೆ, ಅರಣ್ಯ ಇಲಾಖೆಯ ಕಾರ್ಯಕ್ರಮವಾಗಿದ್ದು ಇಲ್ಲಿಯವರೆಗೆ ಸುಮಾರು 3ಕಿ. ಮಿ.ಹೆಕ್ಟೇರುಗಳಷ್ಟು ಅರಣ್ಯಗಳನ್ನು ಬೆಳೆಸಲಾಗಿದೆ ಎಂದು ಅಂದಾಜಿದೆ. ಹಾಳು ಭೂಮಿಯ ಅಭಿವೃದ್ಧಿಗೆ ಪ್ರತಿ ವರ್ಷ 5 ಮಿ. ಹೆಕ್ಟೇರು ಭೂಮಿಯಲ್ಲಿ ಅರಣ್ಯ ಬೆಳೆಸುವ ಅಂದಾಜಿದೆ. ಸರ್ಕಾರ ಇದರ ಯಾವ ರೂಪರೇಷೆಯನ್ನೂ ಕೊಡಲಿಲ್ಲ. ಅಂದಾಜಿನಂತೆ, ಖಾಸಗೀ ಕಂಪನಿಗಳಿಗೆ ಅರಣ್ಯ ಬೆಳೆಸುವ ಅನುಮತಿ ಕೊಡುವುದಲ್ಲದೆ, ಇದಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿ ಭೂಮಸೂದೆಯಲ್ಲಿ ಬದಲಾವಣೆ ತಂದು, ಭೂ ಹಕ್ಕಿನ ಪ್ರಮಾಣದ ಮಟ್ಟವನ್ನು ಏರಿಸುವ ಸಾಧ್ಯತೆ ಇದೆ. ಇದರಿಂದ ಸೇರ ಲಾಭ ಭೂಮಾಲಿಕರಿಗೆ. ಭೂಮಸೂದೆಯ ಕಾನೂನಿನಿಂದ ತಪ್ಪಿಸಿ

(6ನೇ ಪುಟ ನೋಡಿ)

ನಮ್ಮ ಪರಿಸರ ಚಳುವಳಿಗಳು - ಏನನ್ನು "ಅಪ್ಪಿಕೊ"ಂಡಿವೆ ?

"ಕೈಗಾ ಅಣುಶಕ್ತಿ ಸ್ಥಾವರ ಅಪಾಯಕರ", "ಬೇಡ್ತಿ ಯೋಜನೆ ಬೇಡ", "ಬಾರಾಪೂಳೆ ಅನಗತ್ಯ" ಎಂಬಂತಹ ಕೂಗಿನೊಂದಿಗೆ ಪರಿಸರ ಚಳುವಳಿಗಳು ಇತ್ತೀಚಿಗೆ ಬಹಳಷ್ಟು ಸುದ್ದಿಯಲ್ಲಿವೆ. ಉತ್ತರದ ಚಿಪ್ಕೊ ಮತ್ತು ಅದರ ಕರ್ನಾಟಕ ರೂಪ "ಅಪ್ಪಿಕೊ" ಈಗಾಗಲೇ ಬಹಳ ಸುದ್ದಿ ಮಾಡಿದೆ. ಮೊದಲ ನೋಟಕ್ಕೆ ಕಾಣುವ ವಿಚಾರವೆಂದರೆ, ಈ ಚಳುವಳಿಗಳು ಒಂದಲ್ಲ ಒಂದು ಬೆಳವಣಿಗೆ ಯೋಜನೆಗಳನ್ನು ಸಾರಾಸಗಟು ವಿರೋಧಿಸುವ ಚಳುವಳಿಗಳು. ಇತ್ತೀಚಿಗೆ ಇವು ಸಾಕಷ್ಟು ಜನಬೆಂಬಲ ಸಹ ಗಳಿಸಿಕೊಳ್ಳುತ್ತಿವೆ ಎನ್ನುವುದು ಗಮನಾರ್ಹ. ಈ ಜನಪ್ರಿಯತೆಯ ಲಾಭ ಪಡೆಯಲು ಕೆಲವು ಪತ್ರಿಕೆಗಳು ಇಂತಹ ಚಳುವಳಿಗಳಿಗೆ ಭಾರಿ ಕುಮ್ಮಕ್ಕು ಕೊಡುವುದಿದೆ. ಉದಾಹರಣೆಗೆ ಇತ್ತೀಚಿಗೆ ಕನ್ನಡ ಪತ್ರಿಕೆಗಳಲ್ಲಿ ಅಣುಶಕ್ತಿಯ ಬಗ್ಗೆ ಜನರಲ್ಲಿ ಭಯ ಹುಟ್ಟಿಸುವ ಲೇಖನಗಳು ಸಾಲು ಸಾಲಾಗಿ ಬರುತ್ತಿವೆ. ಈ ಚಳುವಳಿಗಳು, ಪರಿಸರ ಮತ್ತು ಅಭಿವೃದ್ಧಿ ಇವು ಒಂದಕ್ಕೊಂದು ವಿರುದ್ಧವಾದವು ಎಂಬ ಅಭಿಪ್ರಾಯ ಮೂಡಿಸುತ್ತಿವೆ. ಇದಕ್ಕೆ ಒಳ್ಳೆಯ ಉದಾಹರಣೆ ಓದುಗರೊಬ್ಬರ ಪ್ರತಿಕ್ರಿಯೆ "ಮನುಕುಲಕ್ಕೆ ಕಂಟಕಪ್ರಾಯವಾಗಿರುವ ಅಣುಶಕ್ತಿ ಅಥವಾ ಕತ್ತಲು ಇವೆರಡರಲ್ಲಿ ಕತ್ತಲಿಗೆ ಒಗ್ಗಿಕೊಳ್ಳುವ ಅನಿವಾರ್ಯತೆಯನ್ನು ಜನ ಒಪ್ಪಿಕೊಳ್ಳುವುದರಲ್ಲಿ ಸಂಶಯವಿಲ್ಲ"

60 ಮತ್ತು 70ರ ದಶಕಗಳಲ್ಲಿ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳಲ್ಲಿ ಪರಿಸರ ಬಿಕ್ಕಟ್ಟಿಗೆ ಸ್ಪಂದಿಸುವ ಭಾರಿ ಚಳುವಳಿಗಳು ಹುಟ್ಟಿಕೊಂಡವು. ಅಂದಿನಿಂದ ಪರಿಸರ ಸಮಸ್ಯೆ ಜಗತ್ತಿನ ಜನರ ಗಮನ ಸೆಳೆದಿದೆ. ನಮ್ಮ ದೇಶದ ಪರಿಸರ ಚಳುವಳಿಗಳು ಪಾಶ್ಚಿಮಾತ್ಯ ಚಳುವಳಿಗಳಂತೆ ಪರಿಸರ ಸಮಸ್ಯೆಯನ್ನು ಸಾಮಾಜಿಕ-ಆರ್ಥಿಕ ಚೌಕಟ್ಟಿಗೆ ಮೀರಿದ್ದು ಎಂದು ಪರಿಗಣಿಸುತ್ತವೆ. ಇವು ವಿರೋಧಿಸುತ್ತಿರುವುದು ಹೆಚ್ಚಾಗಿ–ನೀರಾವರಿ ಯೋಜನೆಗಳನ್ನು, ಜಲವಿದ್ಯುತ್ ಯೋಜನೆಗಳನ್ನು, ಕೈಗಾರಿಕಾ ಘಟಕಗಳನ್ನು. ಈ ಯೋಜನೆಗಳಿಂದ ತತ್ಕ್ಷಣದ ಸಂಕಷ್ಟಗೊಳಗಾಗುವ ಜನರಲ್ಲಿ ಭಾರಿ ಬೆಂಬಲವನ್ನು ಗಳಿಸುತ್ತಿವೆ. ಈ ಚಳುವಳಿಗಳಿಗೆ ಈಗಾಗಲೇ ಈ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಅಥವಾ ಹತ್ತಿರದ ನಗರ ಪ್ರದೇಶಗಳ ಪರಿಸರವಾದಿ ಬುದ್ಧಿಜೀವಿಗಳ ಗುಂಪುಗಳು ನಾಯಕತ್ವ ಕೊಡುತ್ತಿವೆ. ಆದ್ದರಿಂದ ಇವುಗಳ ಧೋರಣೆಯ ಮೇಲೆ ನಾಯಕತ್ವದ ಸೈದ್ಧಾಂತಿಕ ಹಿಡಿತ ಇದ್ದೇಇದೆ ಇಂತಹ ತತ್ಕ್ಷಣದ ಸಮಸ್ಯೆಗಳಿಗೆ ಸೀಮಿತಗೊಳಿಸದೆ ವ್ಯಾಪಕ ರೀತಿಯಲ್ಲಿ ಪರಿಸರ ಸಮಸ್ಯೆಯ ಬಗ್ಗೆ ಕಾಳಜಿಯಿರುವ ಹಲವು ಬುದ್ಧಿಜೀವಿ ಗುಂಪುಗಳೂ ಕೆಲಸ ಮಾಡುತ್ತಿವೆ. ನವದೆಹಲಿಯ "Contre for Science and Environment" (CSE) ಈಗಾಗಲೇ ತನ್ನ "ಭಾರತದ ಪರಿಸರದ ಪರಿಸ್ಥಿತಿ"ಯ ಬಗ್ಗೆ ನಾಗರಿಕ ವರದಿ" ಗಳಿಂದ ಪ್ರಖ್ಯಾತವಾಗಿರುವ ಇಂತಹ ಒಂದು ಗುಂಪು. ಬುದ್ಧಿಜೀವಿವಲಯಗಳಲ್ಲಿ "ಪರಿಸರವಾದ ಒಂದು ಆರ್ಥಿಕ-ಸಾಮಾಜಿಕಸಿದ್ಧಾಂತವಾಗಿ ರೂಪುಗೊಳ್ಳುತ್ತಿದೆ. ಸರ್ಕಾರ ತನ್ನದೇ ಸಹ ಆದ "ಪರಿಸರ ಚಳುವಳಿ" ಯನ್ನು ತನ್ನ ಪ್ರಚಾರ ಮಾಧ್ಯಮಗಳ ಮೂಲಕ ಟಿ. ವಿ., ರೇಡಿಯೋ ಮೂಲಕ ನಡೆಸಿದೆ.

ಪರಿಸರ ಚಳುವಳಿಯಲ್ಲಿ ಹಲವು ಸೈದ್ಧಾಂತಿಕ ಬಣ್ಣಗಳನ್ನು ಕಾಣಬಹುದು. ವನ್ಯಮೃಗಗಳ ಸಂರಕ್ಷಣೆ, ಅರಣ್ಯಗಳ ಸಂರಕ್ಷಣೆ ಮುಂತಾದ "ಪರಿಸರ ಸಂರಕ್ಷಣೆ" ಯೇ ಮುಖ್ಯವಾಗಿರುವುದು ಒಂದು ಬಗೆ. ಈ ಧೋರಣೆಯ ಗುಂಪು, ಚಳುವಳಿಗಳು ಈ "ಸಂರಕ್ಷಣೆ"ಗೆ ಭಂಗ ತರುವಂತಹುದು ಬಿಟ್ಟು ಪರಿಸರ ಸಮಸ್ಯೆಯ ಇತರ ಅಂಶಗಳ ಬಗ್ಗೆ ನಿರ್ಲಕ್ಷದಿಂದಿರುತ್ತದೆ. ಪರಿಸರ ಮಾಲಿನ್ಯದಿಂದ ಸಾಧ್ಯವಾದಷ್ಟು ದೂರದ 'ಗಿರಿಧಾಮ'ಗಳಲ್ಲಿರಬಯಸುವ ಶ್ರೀಮಂತರದು ಈ ಧೋರಣೆ. ಇಂತಹ ಗುಂಪುಗಳು ಜನಬೆಂಬಲಕ್ಕೆ ಅಷ್ಟೇನೂ ಪ್ರಯತ್ನ ಮಾಡುವುದಿಲ್ಲ.

ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು "ಪರಿಸರ ಸಮತೋಲನ" ಕೆಡಿಸುತ್ತವೆ ಎಂಬ ದೂರಿನ ಮೇಲೆ ವಿರೋಧಿಸುವ ಚಳುವಳಿಗಳು ಇನ್ನೊಂದು ಬಗೆ. ಇವೇ ಪರಿಸರ ಚಳುವಳಿಗಳಲ್ಲಿ ಮುಖ್ಯ ಪ್ರಚಾರ ಪ್ರವಾಹ. ಈ ಬಗೆಯಲ್ಲಿ ಕೂಡ ಹಲವು ಥರದ್ದಿವೆ. ಪ್ರಕೃತಿಯ ಸಂಪನ್ಮೂಲ [ಕಾಡು, ಖನಿಜಗಳು ಇತ್ಯಾದಿ] ಗಳನ್ನು ಮನುಷ್ಯ ಮುಟ್ಟಲು ಹೋಗಬಾರದು. ಇಷ್ಟರವರೆಗೆ ಬೆಳವಣಿಗೆ ಯೋಜನೆಗಳಿಗೆ ಪ್ರಕೃತಿ ಹಾಳುಗೆಡವಿದ್ದು ಸಾಕು. ಇನ್ನು ಎಲ್ಲಾ ಬೆಳವಣಿಗೆಯನ್ನು ತಡೆಹಿಡಿಯಬೇಕು. ಎನ್ನುವುದು ಒಂದು ಧೋರಣೆ. ಇನ್ನು ಹಲವು ಭಾರಿ ಯೋಜನೆಗಳ ಕೆಲವು ದುಷ್ಪರಿಣಾಮಗಳನ್ನೇ ದೊಡ್ಡದು ಮಾಡಿ ಪ್ರಚಾರ ಮಾಡುವವು. ಕೈಗಾ ಬಾಡ್ತಿ ಮುಂತಾದವು ಈ ಸಾಲಿಗೆ ಬರುತ್ತವೆ. ಮೊದಲ ನೋಟಕ್ಕೆ ಇವು ಜನಪರ ಎಂಬ ಸೋಗು ತಳೆದ ಅತ್ಯಂತ ಅಪಾಯಕರ ಚಳುವಳಿಗಳು. ಯೋಜನೆಗಳ ದುಷ್ಪರಿಣಾಮಗಳ ಕಾರಣ ಹುಡುಕಿ ಅದರ ವಿರುದ್ಧ ಜನರನ್ನು ಸಂಘಟಿಸುವ ಬದಲಾಗಿ, ಇವು "ಸಣ್ಣದು ಸುಂದರ" ಆದ್ದರಿಂದ ಭಾರಿ ಕೈಗಾರಿಕೆ, ಭಾರಿ ಯೋಜನೆಗ ಹಾನಿಕರ ಮುಂತಾದ ಭ್ರಮೆಗಳನ್ನು ಹುಟ್ಟಿಸಿ ಸಮಾಜವನ್ನು ಹಿಂದಕ್ಕೊಯ್ಯುತ್ತವೆ. ಹಲವು ಬಾರಿ ಈ ವಾದಗಳು ಒಂದಕ್ಕೊಂದು ವಿರೋಧವಾಗಿರುವುದೂ ಉಂಟು. ಉದಾಹರಣೆಗೆ ಅಣುಶಕ್ತಿ ಸ್ಥಾವರದಿಂದ ವಿದ್ಯುತ್‌ಶಕ್ತಿಯ ಉತ್ಪಾದನೆಯ ಮೂಲಕ ಇಂಧನ ಸಮಸ್ಯೆ ಪರಿಹಾರವಾದರೆ ಅರಣ್ಯ ಸಂರಕ್ಷಣೆಗೆ ಪೂರಕ ಎಂಬ ಅಂಶವನ್ನು ಮರೆಯುತ್ತವೆ. ಅಣುಶಕ್ತಿಗಿಂತ ಕಲ್ಲಿದ್ದಲು ಆಧಾರಿತ ವಿದ್ಯುತ್ ಕೇಂದ್ರಗಳು ಹೆಚ್ಚು ಪರಿಸರ ಮಾಲಿನ್ಯ ತರುವಂಥವಾದರೂ, ಎರಡನೆಯದು ಕಡಿಮೆ ಅಪಾಯಕರ ಎಂಬ ಧೋರಣೆ ತಳೆಯುತ್ತದೆ.

ಇನ್ನೂ ಹಲವು ಗುಂಪುಗಳು ಪರಿಸರ ಪ್ರಶ್ನೆಯಲ್ಲಿ ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ಪರಿಣಾಮದ ಅಂಶವನ್ನು ಗಮನಿಸಿವೆ. ಅವು ಪ್ರಕೃತಿಯ ಸಂಪನ್ಮೂಲಗಳ ಉಪಯೋಗದಲ್ಲಿ ಉಳ್ಳವರ ಮೇಲುಗೈಯನ್ನು ವಿರೋಧಿಸಿ ಬಡವರ ಹಕ್ಕುಗಳನ್ನು ಎತ್ತಿ ಹಿಡಿಯುತ್ತವೆ. ಅರಣ್ಯ ಕಂಟ್ರಾಕ್ಟರುಗಳ ಲಾಭ ಬಡುಕತನ ವಿರೋಧಿಸುವ

(6ನೇ ಪುಟ ನೋಡಿ)

ಪರಿಸರವಾದಿ ಖೋಮೈನಿಗಳು

"....ಈ ಪರಿಸರವಾದಿ ಖೊಮೇನಿಗಳನ್ನು ಎಲ್ಲಾ ಕಡೆಯಲ್ಲೂ ನೋಡುತ್ತಿದ್ದೇನೆ ಇವರನ್ನೇನಾದರೂ ಕೇಳಿದರೆ ನನ್ನ ಮೇಲೆ ಎಗರಿ ಬೀಳುತ್ತಾರೆ. ಈ ಪರಿಸರ ಮೂಲಭೂತವಾದಿಗಳು ಅಭಿವೃದ್ಧಿಯ ಪ್ರಕ್ರಿಯೆಗೆ ವಿರೋಧವಾಗಿದ್ದ ಹಾಗೆ ಕಾಣಿಸ್ತದೆ. ಅವರು ಕಾಡುಗಳನ್ನು ಕಾಪಾಡಬೇಕೆನ್ನುತ್ತಾರೆ. ಆದರೆ ಮರಗಳನ್ನು ಕಡಿಯುವುದನ್ನು ತಡೆಯಲು ಅನುವು ಮಾಡಿಕೊಡುವ ವಿದ್ಯುತ್ ಶಕ್ತಿಯನ್ನು ಹಳ್ಳಿಯ ಜನರಿಗೆ ಒದಗಿಸಲು ತಯಾರಿಲ್ಲ. ಅವರು ನೀರಾವರಿ ಅಣೆಕಟ್ಟುಗಳಿಗೆ ವಿರೋಧವಾಗಿದ್ದಾರೆ. ಅಣೆಕಟ್ಟುಗಳು ಭೂಕಂಪಗಳನ್ನು ತರುತ್ತವಂತೆ ....ಇವರು ಒಂದು ಚಳುವಳಿಯಿಂದ ಇನ್ನೊಂದು ಚಳುವಳಿಗೆ ಜಿಗಿಯುತ್ತಿರುತ್ತಾರೆ. ಇವರುಹುಡುಕುತ್ತಿರುವ ರಾಮರಾಜ್ಯದಲ್ಲಿ ಗಾಳಿಗಿರಣಿಗಳು ಮತ್ತು ಸೌರಶಕ್ತಿ ಅಡಿಗೆ ಮಾಡುತ್ತವೆ. ಅವರಿಗೆ ಈ ಸ್ವರ್ಗ ಸಿಕ್ಕಿದರೆ ಅಲ್ಲಿ ಮನೆ ಕಟ್ಟಲು ನಾನು ಎಲ್ಲರಿಗಿಂತಲೂ ಮುಂದು ಆದರೆ !........

–ಖ್ಯಾತ ವ್ಯಂಗ್ಯ ಚಿತ್ರಕಾರ ಮತ್ತು ಅಂಕಣಕಾರ ಅಬೂ ಅಬ್ರಹಾಂ

ಪರಿಸರ ಚಳುವಳಿಗಳು – ಎಡ ಪಕ್ಷಗಳ ವಿರುದ್ಧ ವಿಶ್ವಬ್ಯಾಂಕ್ ನಿರ್ದೇಶಿತ ಟೀಕೆ

[5ನೇ ಪುಟದಿಂದ]

"ಚಿಪ್ಕೊ" "ಅಪ್ಪಿಕೊ" ಚಳುವಳಿ ಇದಕ್ಕೊಂದು ಒಳ್ಳೇ ಉದಾಹರಣೆ. ಇದರಲ್ಲೂ ಪ್ರಕೃತಿಯ ಸಂಪನ್ಮೂಲಗಳನ್ನು ಉಪಯೋಗಿಸುವುದನ್ನು ಒಂದು ಹಂತದಲ್ಲಿ ತಡೆಹಿಡಿಯಬೇಕು ಎಂಬ ಆಶಯವಿದೆ. ಪ್ರಕೃತಿಯಲ್ಲಿ ಸರಿಪಡಿಸಲಾಗದಂತಹ ದುಷ್ಪರಿಣಾಮಗಳು ಬರದಂತೆ ಸಂಪನ್ಮೂಲಗಳ ವೈಜ್ಞಾನಿಕ ಉಪಯೋಗಕ್ಕೆ ಇವೂ ಹಿಂದೇಟು ಹಾಕುತ್ತವೆ.

ಇದಲ್ಲದೆ ಸಮಸ್ಯೆಯ ಯಾವುದೇ ಒಂದು ಅಂಶವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವ ಆಂಶಿಕತೆ ಇರುವ ಚಳುವಳಿಗಳೂ ಇವೆ ಅರಣ್ಯ,ಭೂಸಾರ ವಿಸರ್ಜನೆ, ವಾಯುಮಾಲಿನ್ಯ, ಕೈಗಾರಿಕಾ ಕಲ್ಮಶಗಳು ಮುಂತಾದ ಬಿಡಿ ಸಮಸ್ಯೆಗಳನ್ನು ಬೇರೆ ಬೇರೆಯಾಗಿ ತೆಗೆದುಕೊಂಡು, ಇದೊಂದೇ ಸಮಸ್ಯೆ ಎನ್ನುವ ಧೋರಣೆಯನ್ನು ಇವು ತಳೆಯುತ್ತವೆ. ಆದ್ದರಿಂದ ಈ ಚಳುವಳಿಗಳು ಸೂಚಿಸುವ ಪರಿಹಾರಗಳು ಅಷ್ಟೇ ಆಂಶಿಕವಾಗಿರುತ್ತವೆ. ಈ ಬಿಡಿ ಸಮಸ್ಯೆಯ ಪರಿಹಾರಕ್ಕಾಗಿ ಜನಸಮುದಾಯದ ಒಟ್ಟು ಹಿತಾಸಕ್ತಿಯನ್ನು ಪೂರ್ಣವಾಗಿ ಕಡೆಗಣಿಸುವ ಧೋರಣೆ ಇವರದು "ಜನಸಾಮಾನ್ಯರಿಗೆ ಅನಾನುಕೂಲವಾಗದಂತೆ ಅರಣ್ಯಗಳ ಸಂರಕ್ಷಣೆ ಸಾಧ್ಯವೆಂಬುದು ಒಂದು ಅಪಾಯಕಾರಿ ಭ್ರಮೆ ಮಾತ್ರ" (ಕೆ. ಉಲ್ಲಾಸ ಕಾರಂತ "ಅರಣ್ಯ ಮತ್ತು ಸಮಾಜ" ಪುಸ್ತಕದಲ್ಲಿ) ಎನ್ನುವ ಮಾತು ಇದಕ್ಕೊಂದು ಒಳ್ಳೆಯ ಉದಾಹರಣೆ. "ಮರ ಬೆಳೆಸಿರಿ" ಮುಂತಾದ ಸರಳೀಕೃತ ಸರ್ಕಾರಿ ಪರಿಹಾರಗಳೂ ಇದೇ ಸಾಲಿಗೆ ಸೇರುತ್ತವೆ.

ಅರಣ್ಯಗಳ ನಾಶ ಮತ್ತು ದಟ್ಟದರಿದ್ರರಿಗೆ ಜೀವನೋಪಾಯದ ಸಮಸ್ಯೆ ಪರಿಹರಿಸಲು "ಸಾಮಾಜಿಕ ಅರಣ್ಯ ಯೋಜನೆ" ರಾಮಬಾಣ ಎನ್ನುವ ಗುಂಪುಗಳು ಇನ್ನೊಂದು ಬಗೆ. ಇದಕ್ಕೆಸರಕಾರದಸಬ್ಸಿಡಿಯಕುಮ್ಮಕ್ಕು ಇದೆ. ಆದರೆ ನಿಜವಾಗಿಯೂ ನಡೆಯುತ್ತಿರುವುದು ಈ "ಸಾಮಾಜಿಕ ಅರಣ್ಯ" ಗಳಲ್ಲಿ ನೀಲಗಿರಿಯಂತಹ ಕೈಗಾರಿಕೆಗೆ ಮೂಲ ವಸ್ತುವಾದ ಮರಗಳ ತೋಟ. ಇದು ಬೇಕಾಗಿರುವುದು ನಮ್ಮ ಗುತ್ತೆದಾರಿ ಬಂಡವಾಳಶಾಹಿಗಳಿಗೆ ಮತ್ತು ವಿದೇಶೀ ಬಹುರಾಷ್ಟ್ರಿಯ ಸಂಸ್ಥೆಗಳಿಗೆ ಈ ಯೋಜನೆಗೆ ಜನಸಾಮಾನ್ಯರ ಬೆಂಬಲಗಳಿಸುವ ಏಕೈಕ ಉದ್ದೇಶ ಹೊಂದಿರುವ ಗುಂಪುಗಳು, ಪರಿಸರವಾದಿಗಳೂ ಇದ್ದಾರೆ. ಆದರೆ ಇದನ್ನು ಅರಣ್ಯೀಕರಣದ ಹೆಸರಿನಲ್ಲಿ ನಡೆಸಲಾಗುತ್ತಿದೆ.

ಈಗಾಗಲೇ ಹೆಸರಿಸಿರುವ (CSE) ಯಂತಹ ಗುಂಪುಗಳಿಗೆ ಪರಿಸರ ಮತ್ತು ಬೆಳವಣಿಗೆಯ ಸಮಸ್ಯೆಗಳ ಗಾಢ ಸಂಬಂಧಗಳ ಮತ್ತು ಇವೆರಡರ ಮೇಲೆ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಪರಿಣಾಮದ ಅರಿವು ಇದೆ. ಆದರೆ ಇವು ಸಹ ನಮ್ಮ ಪರಿಸರದ ಶತ್ರುಗಳಾದ ಸಾಮ್ರಾಜ್ಯಶಾಹಿ, ಗುತ್ತೇದಾರಿ ಬಂಡವಾಳಶಾಹಿ, ಪಾಳೆಯಗಾರಿ-ಶಕ್ತಿಗಳನ್ನು ಹೊಡೆದೋಡಿಸುವ ಮೂಲಭೂತ ಬದಲಾವಣೆಗೆ ಅಂಜುತ್ತವೆ. ಖಾಸಗಿ ಆಸ್ತಿಯನ್ನು ಪ್ರಶ್ನಿಸಲು ಹಿಂಜರಿಯುತ್ತವೆ. ಬದಲಾಗಿ ಎಡ ಚಳುವಳಿ ಪರಿಸರ ಸಮಸ್ಯೆಯ ಗಹನತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತಿದೆ. ಜನರೊಡನೆ "ಸಜೀವ" ಸಂಬಂಧವಿಟ್ಟುಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳು ಮಾತ್ರ ಪರಿಸರ ಸಮಸ್ಯೆಯ ಜನಪರ ಪರಿಹಾರಕ್ಕೆ ಹೋರಾಡಬಲ್ಲುವು ಎಂಬ ವಿಶ್ವಬ್ಯಾಂಕ್ ನಿರ್ದೇಶಿತ ಟೀಕೆಗಳನ್ನು ಇವು ಎಡ ಪಕ್ಷಗಳ ವಿರುದ್ಧ ಮಾಡುತ್ತವೆ.

ಪರಿಸರ ಚಳುವಳಿಗಳ ಈ "ರಾಜಕೀಯ" ವನ್ನು ಹಿಮ್ಮೆಟ್ಟಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ, ಆದರಲ್ಲೂ ಟ್ರೇಡ್ ಯೂನಿಯನ್ ಚಳುವಳಿ ಗಮನ ಹರಿಸಬೇಕಾಗಿದೆ. ಅಭಿವೃದ್ಧಿ ಯೋಜನೆಗಳ ದುಷ್ಪರಿಣಾಮ ತಪ್ಪು ಕಾರ್ಯಾಚರಣೆಗಳ ವಿರುದ್ಧ ಜನರನ್ನು ಸಂಘಟಿಸುವುದು, ಕೈಗಾರಿಕಾ ಸುರಕ್ಷತೆ ; ಪರಿಸರ ಬಿಕ್ಕಟ್ಟನ್ನು ಸೃಷ್ಟಿಸುವ ಆಳುವ ವರ್ಗಗಳನ್ನು ಬಯಲು ಮಾಡುವುದು ವರ್ಗ ಹೋರಾಟದ ಅನಿವಾರ್ಯ ಭಾಗವಾಗಬೇಕು. ಸಿ. ಐ. ಟಿ. ಯು. ಈ ದಿಸೆಯಲ್ಲಿ ಈಗಾಗಲೇ ಸರಿಯಾದ ಹೆಜ್ಜೆ ಇಟ್ಟಿದೆ. ಅರಣ್ಯದ ಉತ್ಪನ್ನಗಳನ್ನು ಸಂಗ್ರಹಿಸಲು ಮತ್ತು ಪರಂಪರಾಗತ ಜೀವನ ಕ್ರಮ ಮುಂದುವರಿಸಿಕೊಂಡು ಹೋಗಲು ಆದಿವಾಸಗಳ ಹಕ್ಕಿಗೆ ಕಿಸಾನ ಸಭಾ ತನ್ನ ದನಿ ಎತ್ತಿದೆ.

– ಶರತ್ ಚಂದ್ರ.

ದಾರಿಗೆಡಿಸುವ ಪ್ರಯತ್ನ

ಸಮಾಜವಾದಿ ದೇಶಗಳ ಮೇಲ್ಪಂಕ್ತಿ ಇದ್ದಾಗ್ಯೂ, ಜಾಗತಿಕ ಮಟ್ಟದಲ್ಲಿ ಪರಿಸರ ಬಿಕ್ಕಟ್ಟು ತೀವ್ರವಾಗುತ್ತಾ ನಡೆದಿದೆ. ಇದಕ್ಕೆ ಕಾರಣ ಜಗತ್ತಿನ ದೊಡ್ಡ ಭಾಗ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಅಥವಾ ನವವಸಾಹತುಶಾಹಿ ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಇನ್ನೂ ಇರುವುದು. ಪರಿಸರ ಬಿಕ್ಕಟ್ಟು ಜಗತ್ತಿನ ಈ ದೊಡ್ಡ ಭಾಗದ ಜನಸಾಮಾನ್ಯರನ್ನು ಕಾಡುತ್ತಿದ್ದು, ಪರಿಸರದ ಈ ಶೋಷಣೆಯ ವಿರುದ್ಧ ಹಲವು ಚಳುವಳಿಗಳು ಹುಟ್ಟಿಕೊಂಡು ಬಲವಾಗುತ್ತಿವೆ. ಆದ್ದರಿಂದ ಬೂರ್ಜ್ವಾ ಜಗತ್ತಿನ ಜನಪರ ಚಳುವಳಿಗಳು, ಪ್ರಗತಿಪರ ಮತ್ತು ಕಮ್ಯುನಿಸ್ಟ್ ಅಥವಾ ಕಾರ್ಮಿಕರ ಪಕ್ಷಗಳಿಗೆ ಶಾಂತಿ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಗತಿಯ ಬಗೆಗಿನ ಚಳುವಳಿಯಲ್ಲಿ ಪರಿಸರ ಬಿಕ್ಕಟ್ಟು ಪ್ರಮುಖ ವಿಷಯವಾಗಿದೆ. ಪರಿಸರ ಬಿಕ್ಕಟ್ಟಿಗೂ ಸಾಮಾಜಿಕ ವ್ಯವಸ್ಥೆಗೂ ಇರುವ ನಿಕಟ ಸಂಬಂಧ ಇವರಿಗೆ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದ್ದು, ಇದು ಆಳುವ ವರ್ಗಗಳಿಗೆ ಆತಂಕಕಾರಿಯಾಗಿದೆ. ಆದ್ದರಿಂದ ಇವು ಪರಿಸರ ಚಳುವಳಿಯನ್ನು ಸೈದ್ಧಾಂತಿಕವಾಗಿ ದಾರಿಗೆಡಿಸುವ ಹಲವು ಚಳುವಳಿಗಳನ್ನು ಹುಟ್ಟು ಹಾಕುತ್ತಿವೆ. ಇಂತಹ ಚಳುವಳಿಗಳ ಸೈದ್ಧಾಂತಿಕ ಆಧಾರಗಳನ್ನು ವಿಮರ್ಶಿಸುವುದು ಅಗತ್ಯ.

ಶೇಖಡ 70 ರಷ್ಟು ನೀರು ಮಾಲಿನವಾಗಿದೆ

[4ನೇ ಪುಟದಿಂದ]

ಕೊಳ್ಳುವುದು ಮಾತ್ರ ಅಲ್ಲದೇ, ಫಲವತ್ತಾದ ಕೃಷಿಯೋಗ್ಯ ಭೂಮಿಯಲ್ಲಿ ನೀಲಗಿರಿಯನ್ನು ಬೆಳೆಯಿಸಿ (ಇಲ್ಲವೇ ಕೈಗಾರಿಕೆಗೆ ಉಪಯುಕ್ತವಾದ ಮರಗಳನ್ನು ಬೆಳೆಯಿಸಿ) ಆಹಾರ ಉತ್ಪಾದನೆಯಲ್ಲಿ ಬೃಹತ್ ಪ್ರಮಾಣದ ಕೊರತೆ ಉಂಟಾಗುವ ಸಾಧ್ಯತೆ ಇದೆ. ಗುಜರಾತ್‌ನಲ್ಲಿ ಮಾಡಿದ ಅಧ್ಯಯನದಿಂದ ಇದು ಸಾಬೀತಾಗಿದೆ. ಇದರಿಂದ ಭೂಮಿಯನ್ನು ಕಳೆದುಕೊಂಡ ಬಡರೈತ ಕೃಷಿಗಾಗಿ ಫಲವತ್ತಿಲ್ಲದ, ಕೃಷಿಯೋಗ್ಯವಲ್ಲದ ಭೂಮಿಯನ್ನು ಅವಲಂಬಿಸಬೇಕಾಗಿ ಬರುತ್ತದೆ.

ಅರಣ್ಯ ನಾಶದಿಂದ ಸಾಮಾಜಿಕ ಹಾಗೂ ಆರ್ಥಿಕ ವ್ಯತಿರಿಕ್ತಗಳಲ್ಲದೇ ಭೂಮಿ ಹದಗೆಡುವುದೂ ನಡೆಯುತ್ತಿದೆ. ಸರಕಾರಕ್ಕೆ ಒಂದು ಯೋಜಿತ ಶಕ್ತಿಯ ನೀತಿ ಇಲ್ಲದಾಗ ಬಡ ಜನತೆ ಉರುವಲಿಗಾಗಿ ದನದ ಸಗಣಿಯನ್ನು ಉಪಯೋಗಿಸುವುದರಿಂದ ಉತ್ತಮವಾದ ಸ್ವಾಭಾವಿಕ ಗೊಬ್ಬರ ಭೂಮಿಗೆ ಸಿಕ್ಕದಂತಾಗುತ್ತದೆ. ಅರಣ್ಯ ನಾಶವಾಗಿ ಭೂ ಸವಕಲು ಹೆಚ್ಚುತ್ತದೆ. ತಪ್ಪಾದ ನೀರಾವರಿ ಯೋಜನೆ, ಯೋಜನೆಗಳನ್ನು ಅನುಷ್ಠಾನಕ್ಕೆ ತಾರದೇ ಇರುವುದು, ಭೂ ಅಭಿವೃದ್ಧಿ ಕಾರ್ಯದ ನಿಷ್ಕ್ರಿಯತೆ ಇವೆಲ್ಲವೂ ಭೂಮಿ ಹಾಳಾಗಲು ಸಹಾಯವಾಗುತ್ತದೆ. ನಮ್ಮ ದೇಶದಲ್ಲಿ ಶೇ 50ರಷ್ಟು ಭೂಮಿ ಹಾಳುಗೆಡಲ್ಪಟ್ಟ ಭೂಮಿ ಎಂದು ಕೇಂದ್ರ ಸರಕಾರ ಘೋಷಿಸಿದೆ.

ಕೈಗಾರಿಕೆ, ಕೃಷಿ, ಹಾಗೂ ಮುನ್ಸಿಪಾಲಿಟಿಗಳು ಜಲಮಾಲಿನ್ಯಕ್ಕೆ ಮುಖ್ಯ ಕಾರಣಗಳು. ನಮ್ಮ ದೇಶದ 70 ಶೇಖಡ ನೀರು ಮಾಲಿನ್ಯಕ್ಕೆ ಒಳಗಾಗಿದೆ. ಕೈಗಾರಿಕೆಗಳಿಂದ ನದಿಗೆ ಹರಿದು ಬಿಡುವ ಮಲಿನ ರಾಸಾಯನಿಕಗಳು, ಕೃಷಿಯಲ್ಲಿ ಉಪಯೋಗಿಸುವ ಕೀಟನಾಶಕಗಳು, ನದಿಯನ್ನು ಸೇರಿ, ನದಿಯಲ್ಲಿರುವ ಮೀನುಗಳಿಗೆ ಅಪಾಯ ತಂದೊಡ್ಡುವುದು ಮಾತ್ರವಲ್ಲದೆ, ನದಿಯ ತೀರದಲ್ಲಿ ವಾಸಿಸುವ ಜನರಿಗೂ ಅಪಾಯ ತರುವುದು. ಈ ರಾಸಾಯನಿಕದ ದುಷ್ಪರಿಣಾಮಗಳು ಕಾಲಾವಧಿಯ ವಿಸ್ತಾರದಲ್ಲಿ ಹೆಚ್ಚಿರುವುದು. ಕೈಗಾರಿಕಾ ಕೇಂದ್ರಗಳನ್ನು ಬಿಟ್ಟರೆ ಉಳಿದೆಡೆ ವಾಯು ಮಾಲಿನ್ಯವು ಜಲ ಮಾಲಿನ್ಯದಷ್ಟು ಕೆಟ್ಟವಾಗಿಲ್ಲ ಕಾರ್ಖಾನೆಯ ಹೊಗೆ ಕೊಳವೆಯಿಂದ ಬರುವ ಗಂಧಕದ ಡೈಆಕ್ಸೈಡ್, ಸಾರಜನಕದ ಆಕ್ಸೈಡ್, ಇಂಗಾಲದ ಸೂಕ್ಷ್ಮ ಕಣಗಳು, ಸೀಸ ತೇವ, ವಿಷಪೂರಿತ ಅನಿಲ ಇವು ಜನತೆಯ ಆರೋಗ್ಯ ಹಾಗೂ ಜೀವ ಜಗತ್ತಿನ ಆರೋಗ್ಯಕ್ಕೆ ಮಾರಕ ಆಗಿವೆ. ಅನುಷ್ಠಾನಕ್ಕೆ ತಾರದ ಯೋಜನೆಗಳು, ಅತೀ ಲಾಭಕ್ಕಾಗಿ ಮಾಡುವ ಅಜಾಗರೂಕತೆ, ಬಂಡವಾಳಶಾಹೀಯ ರಾಜಕೀಯ ಶಕ್ತಿ, ಕಾರ್ಯ ಅನುಷ್ಠಾನದಲ್ಲಿ ಸರಕಾರದ ವಿಫಲತೆ, ಕಾರ್ಖಾನೆಗಳಲ್ಲಿನ ಯಾಂತ್ರಿಕ ದೋಷ, ಕೀಳು ಮಟ್ಟದ ಕೈಗಾರಿಕಾ ಉರುವಲು ಇತ್ಯಾದಿ, ವಾಯು ಮಾಲಿನ್ಯದ ಪ್ರಮುಖ ಕಾರಣಗಳು.

ನಮ್ಮ ದೇಶದ ಪರಿಸರ ಸಮಸ್ಯೆ ಇಷ್ಟೆಲ್ಲ ಗಂಭೀರವಾಗಿದ್ದರೂ. ಪ. ಬಂಗಾಲದ ಎಡರಂಗ ಸರಕಾರ ಇದನ್ನು ವಿಶೇಷವಾದ ಗಣನೆಗೆ ತಂದುಕೊಂಡಿರುವುದು ಒಂದು ಆಶಾದಾಯಕ ಸಂಗತಿ ಆಗಿದೆ. ಎಡರಂಗ ಸರಕಾರ ಪರಿಸರ ರಕ್ಷಣೆಯ ನಿಟ್ಟಿನಲ್ಲಿ ಮಹತ್ತರವಾದ ಹೆಜ್ಜೆಯನ್ನಿಟ್ಟಿದೆ. ಕೇಂದ್ರ ಸರಕಾರ ಸಹಕಾರ ಇಲ್ಲದೇ ಈ ಕಾರ್ಯಕ್ರಮ ಸಫಲವಾಗುವುದು ಕಷ್ಟವಾದರೂ, ಪರಿಸರ ರಕ್ಷಣೆಗೆ ತನ್ನದೇ ಆದ ಕಾನೂನುಗಳನ್ನು ರಚಿಸಿಕೊಂಡಿದೆ. ಪರಿಸರ ಮಾಲಿನ್ಯಕ್ಕೆ ಕಾರಣವಾದ ಸುಮಾರು 100 ಕಾರ್ಖಾನೆಗಳನ್ನು ಗುರುತಿಸಿ, ಅವುಗಳಲ್ಲಿ ಬಿಗಿ ಕ್ರಮ ತೆಗೆದುಕೊಳ್ಳಲಾಗಿದೆ. ಉಳಿದ ಕಾರ್ಖಾನೆಗಳಿಗೆ ಹೊರ ಹೋಗುವ ರಾಸಾಯನಿಕ ಹಾಗೂ ಅನಿಲಗಳ ಚೇರ್ಪಡಿಸುವ ಯೋಜನೆಗಳನ್ನು ರೂಪಿಸಿ ಕೊಡುವಂತೆ ಆಜ್ಞೆ ಮಾಡಲಾಗಿದೆ. ಗಂಗಾ ನದಿಯನ್ನು ಅನೇಕ ಸ್ಥಳಗಳಲ್ಲಿ ಪ್ರತಿ ದಿನವೂ ಶುದ್ಧತೆಯ ಬಗ್ಗೆ ಪರಿಶೀಲಿಸುತ್ತಿದೆ. ಪರಿಸರ ಮಾಲಿನ್ಯದ ಅಧ್ಯಯನದ ಬಗ್ಗೆ ಅನೇಕ ವಿಜ್ಞಾನ ಸಂಘ, ತಾಂತ್ರಿಕ ಕಾಲೇಜು ಹಾಗೂ ಸಾಮಾನ್ಯ ಜನರನ್ನು ತೊಡಗಿಸಿದೆ ಪರಿಸರ ರಕ್ಷಣೆಗೆ ಒಂದು ಇಲಾಖೆಯನ್ನೇ ಮಾಡಲಾಗಿದೆ.

ನಮ್ಮ ದೇಶದಲ್ಲಿ ಅಪಾಯಕಾರೀ ಪರಿಸ್ಥಿತಿ ಅಂದರೆ, ಕೈಗಾರಿಕಾ ವಿರೋಧಿಗಳಾದ 'ಪರಿಸರ ವಾದಿ'ಗಳು, ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಜನರಲ್ಲಿ ತಪ್ಪು ಕಲ್ಪನೆಯನ್ನು ಹುಟ್ಟಿಸಿರುವುದು ಇವುಗಳನ್ನು ಪ್ರಾರಂಭಿಸಿದ ಸ್ವಯಂ ಸೇವಾ ಸಂಘಗಳು ಸಾಮ್ರಾಜ್ಯಶಾಹಿಗಳಿಂದ ಹಣ ಪಡೆದು, ಅವರ ನಿರ್ದೇಶನದಂತೆ ಕೆಲಸ ಮಾಡುತ್ತಿವೆ. ಜನತೆಯ ಹೋರಾಟವನ್ನು ತಪ್ಪು ದಾರಿಗೆಳೆಯುವುದು, ನಮ್ಮ ಯೋಜಿತ ಕೈಗಾರಿಕರಣವನ್ನು ವಿರೋಧಿಸುವುದು, ಬುಡಕಟ್ಟಿನ ಜನಾಂಗವನ್ನು ಜನರ ವಿರುದ್ಧ ತಿರುಗಿಸುವುದು, ಹಳ್ಳಿಯ ಬಡವರನ್ನು ಪಟ್ಟಣದ ಬಡವರ ವಿರುದ್ಧ ತಿರುಗಿಸುವುದು, ಅಭಿವೃದ್ಧಿ ಹಾಗೂ ಪರಿಸರ ರಕ್ಷಣೆಯಲ್ಲಿ ಘರ್ಷಣೆ ಇರುವಂತೆ ತೋರಿಸುವುದು, ಇವೆಲ್ಲವೂ ಸಾಮ್ರಾಜ್ಯಶಾಹಿಗಳ ಕುತಂತ್ರವಾಗಿವೆ.

– ಶಶಿಧರ್

ಜಿಲ್ಲಾ ಪರಿಷತ್ ಚುನಾವಣೆಗಳು – ಒಂದು ಅನುಭವ

– ಆರ್. ಮೋಹನ್

ನಮಗೆ ದೊರೆತ ಒಂದೇ ಒಂದು ಮೆಟಡಾರ್‌ನಲ್ಲಿ ನಾವು ಇಡೀ ಕ್ಷೇತ್ರದ 50 ಹಳ್ಳಿಗಳಲ್ಲಿ ಪ್ರಚಾರ ಮಾಡುತ್ತಾ ಅಂದರೆ ಪ್ರತಿಹಳ್ಳಿಯಲ್ಲೂ ಸಹ ಗೋಡೆ ಬರಹ ಮಾಡುತ್ತಾ, ಜನಪರವಾದ ಹಾಡುಗಳನ್ನು ಹಾಡುತ್ತಾ ಮತ್ತು ಭಾಷಣಗಳನ್ನು ಮಾಡುತ್ತಾ ಸಾಗುತ್ತಿದ್ದೆವು. ನಮಗೆ ಈ ಸಮಯದಲ್ಲಿ ಕೆಲವು ದಿನ ಊಟದ ಅನಾನುಕೂಲತೆಗಳು ಇದ್ದರೂ ಸಹ ನಾವು ಹಳ್ಳಿಯಲ್ಲಿ ಮತದಾರರನ್ನ ಮತ ಕೇಳುವುದರೊಟ್ಟಿಗೆ ಊಟವನ್ನು ಕೇಳಿ ಮಾಡಿದ ಸಂದರ್ಭಗಳು ಉಂಟು. ನಮಗೆ ಮುತ್ಸಂದ ಮತ್ತು ಬಿಸನ ಹಳ್ಳಿಗಳಲ್ಲಿ ಪ್ರಚಾರಕ್ಕೆ ಅಡ್ಡಿಯುಂಟಾದರು ಸಹ ಪ್ರಚಾರ ನಡೆಸಿದ್ದೆವು. ಕೆಲವೆಡೆಗಳಲ್ಲಿ ನಮ್ಮ ಸಿ. ಐ. ಟಿ. ಯು. ಕಾರ್ಯಕರ್ತರ ಮನೆಗಳ ಮೇಲಿ

ಜನತಾ ಬಾವುಟವು ಹಾರಾಡುವುದನ್ನು ನಾವು ನೋಡಿದ್ದುಂಟು. ಕಾಂಗ್ರೆ— ಜನತಾ ಪಕ್ಷಗಳು ಬಳಸಿದ ವಾಹನಗಳು ಮತ್ತುಬಾಡಿಗೆ ಜನರ ಅಭಿಪ್ರಾಯದಲ್ಲಿ ಪ್ರಚಾರಕ್ಕೆ ಹೋಲಿಸಿದರೆ ಹಳ್ಳಿಯ ಜನರ ನಡುವೆ ನಾವೇ ಪ್ರಚಾರದಲ್ಲಿ ಮೇಲಗೈ ಪಡೆದಿದ್ದೆವು.

ಹಣ ಬಲವಿರುವ ಕಾಂಗ್ರೆ ಮತ್ತು ಹಣಬಲದ ಜತೆಯಲ್ಲಿ ಅಧಿಕಾರ. ಜಾತಿಯ ರಾಜಕೀಯದ ಜನತಾಗಳಂತ ಪಕ್ಷಗಳ ಜೊತೆಯಲ್ಲಿ ನಮ್ಮಂಥ ಪಕ್ಷಗಳು ಸ್ಥಳೀಯವಾಗಿ ಬಲಿಷ್ಟ ಸಂಘಟನೆಯಿಲ್ಲದೆ. ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ತರಬೇತಿ ಹೊಂದದ ಕಾರ್ಯಕರ್ತರಿಲ್ಲದೆ. ಬಂಡವಾಳಶಾಹಿ ಸಮಾಜದಲ್ಲಿ ಸ್ಪರ್ಧಿಸಿ ಸೆಣಸಾಟ ನಡೆಸುವುದು ಕಷ್ಟಕರವಾಗಿದೆ.

ನಾವು ಪ್ರಚಾರ ಮಾಡುತ್ತಿದ್ದಾಗ ನಮ್ಮ ಪ್ರತಿ ಹಳ್ಳಿಗಳಲ್ಲಿಯೂ ಕೊಳವೆ ಬಾವಿಗಳು ಕಾಣುತ್ತಿದ್ದೆವು. ಆದರೆ ಕೆಲವು ಹಳ್ಳಿಗಳಲ್ಲಿ ಸರಿಯಾದ ರಸ್ತೆಗಳಿರುತ್ತಿರಲಿಲ್ಲ. ಕೆಲವು ಹಳ್ಳಿಗಳಲ್ಲಿ ನಮ್ಮ ಮೆಟಡಾರ್ ಅನ್ನು ಊರ ಹೊರಗೆನಿಲ್ಲಿಸಿ ನಾವು ನಡೆದು ಪ್ರಚಾರ ನಡೆಸುತ್ತಿದ್ದ ಸಂದರ್ಭಗಳೂ ಉಂಟು. ರಸ್ತೆಯ ಇಲ್ಲದ ಮೇಲೆ ಇನ್ನು ಸಾರಿಗೆ ಸೌಕರ್ಯದ ಮಾತೇ ಬರುವುದಿಲ್ಲ. ಶಾಲೆ, ಆಸ್ಪತ್ರೆ ಹಾಗು ಹಸಿರುಕಾರ್ಡ್

(8ನೇ ಪುಟ ನೋಡಿ)

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್

ಹೋರಾಟದ ಉಸಿರಿಗೆ ಕೆಂಪುವಂದನೆ

– ಜಿ. ಎನ್. ಮೋಹನ್

ಈ ಜನವರಿ 8, 1987 ಕ್ಕೆ ಆಫ್ರಿಕಾದ ಜನರ ಹೋರಾಟದ ಉತ್ಸಾಹದ ಚಿಲುಮೆಗೆ 75 ವರ್ಷ ತುಂಬುತ್ತದೆ. ಆಫ್ರಿಕಾ ಹೋರಾಟ ಇಂದು ಒಂದು ದಂತ ಕಥೆಯಲ್ಲ, ಸಾಹಸಗಳ ಸರಮಾಲೆ.

ಈ ಜನವರಿ 8, 1987ಕ್ಕೆ ಆಫ್ರಿಕಾದ ಜನರ ಹೋರಾಟದ ಉತ್ಸಾಹದ ಚಿಲುಮೆಗೆ 75 ವರ್ಷ ತುಂಬುತ್ತದೆ. ಆಫ್ರಿಕಾ ಹೋರಾಟ ಇಂದು ಒಂದು ದಂತೆ ಕಥೆಯಲ್ಲ. ಸಾಹಸಗಳ ಸರಮಾಲೆ. ಎದೆಯಲ್ಲಿ ಉರಿವ ಅಸಂತೋಷದ ಕೊಳ್ಳಿಯಿಟ್ಟುಕೊಂಡಿರುವ ದೇಶ. ಕಪ್ಪು ನಾಡಿನಲ್ಲಿ ಸ್ವಾತಂತ್ರ್ಯದ ಬೆಳ್ಳಿಕಿರಣಗಳನ್ನುಮೂಡಿಸಲು ದೀರ್ಘ 75 ವರ್ಷಗಳಿಂದಲೂ ಶ್ರಮಿಸುತ್ತಿರುವ ದೇಶ. ಇಷ್ಟೆಲ್ಲಾ ಹೋರಾಟಗಳ ಬೆನ್ನೆಲುಬು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್.

ಆಫ್ರಿಕಾ ದೇಶದ ಹೋರಾಟದ ಉಸಿರು ನೆಲ್ಸನ್ ಮಾಂಡೆಲಾ ಬಂದೀಖಾನೆಗೆ ಸೇರಿ ಉರುಳಿದವರ್ಷಗಳು ಹಲವಾದರೂ ಅದಕ್ಕಿಂತಲೂ ದೀರ್ಘವಾದ ಹಿನ್ನೆಲೆ ಈ ಕಾಂಗ್ರೆಸ್‌ಗಿದೆ. ಆಫ್ರಿಕಾದ ಈ ನಿರಂತರ ಹೋರಾಟ ಇಡೀ ವಿಶ್ವ ಸಮುದಾಯದ ಹೋರಾಟಕ್ಕೆ ಸ್ಫೂರ್ತಿಯೊದಗಿಸಿದೆ. ನಿರಂತರ ಹೋರಾಟ ತನ್ನ ಒಡಲಿನ ಕಾವು ಕಳೆದುಕೊಳ್ಳುವುದಿಲ್ಲ ಎನ್ನುವುದಕ್ಕೆ ಇದು ಮತ್ತೊಂದು ಉದಾಹರಣೆ. ಆಫ್ರಿಕಾ ಸಹ ನಮ್ಮ ಭಾರತದ ಹೋರಾಟಗಳ ಸಮಕಾಲೀನ. 1907 ರಲ್ಲಿ ಇಲ್ಲಿ ಹೋರಾಟ ನಡೆದು ಲಾಲ್, ಬಾಲ್, ಪಾಲ್‌ಗಳು,ಬೆಳಕಿಗೆ ಬಂದರೆ ಆಫ್ರಿಕೆಯಲ್ಲಿ 1906 ರಲ್ಲಿಯೇ ಹೋರಾಟ.ಎರಡೂ ದೇಶಗಳಲ್ಲಿ ಒಂದೇ ಒಡೆದು ಆಳುವ ಪದ್ಧತಿ.

ಆಫ್ರಿಕೆಯ ಜನ ಮರಕೊರೆಯುವ ನೀರೆಳೆಯುವ ಜನರಂತೆ ಪರಿಗಣಿಸಲ್ಪಟ್ಟಿದ್ದರು. ಎಲ್ಲ ಪ್ರಜೆಗಳಿಗೂ ಅಷ್ಟೆ ಸ್ಥಾನಮಾನ. 1909 ರಲ್ಲಿ ಇದನ್ನು ಸಂವಿಧಾನಕ್ಕೆ ಸೇರಿಸಲಾಯಿತು. 1910ರ ಸಂವಿಧಾನದ ವಿಧಿಗಳು ಆಫ್ರಿಕಾದ ಪ್ರಜೆಗಳನ್ನೇ ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ಹೊರ ಹಾಕಿದುವು. ಆಫ್ರಿಕೆಯಲ್ಲಿ ಆಫ್ರಿಕಾದ ಜನರಿಗೇ ಸರಪಳಿಯ ಮಾಲೆ. ಜನ ಹೋರಾಟ ಪ್ರಾರಂಭ. 1912 ರಲ್ಲಿ ದ. ಆಫ್ರಿಕಾ ನೇಟಿವ್ ನ್ಯಾಶನಲ್ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂತು. ಮುಂದೆ ಇದೇ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ಸಾಗಿ ಬದಲಾಯಿತು. 1911 ರಲ್ಲಿ ಜಾರಿಗೆ ಬಂದ ಮತ್ತೆರಡು ವಿಧಿಗಳು ಆಫ್ರಿಕಾ ಜನರ ಕಣ್ಣಿನ ಬಣ್ಣ, ತುಟಿಯ ದಪ್ಪ, ಮೈ ಬಣ್ಣ, ಸೌಂದರ್ಯ, ತಲೆಯಕೂದಲುಗಳ ಆಧಾರದ ಮೇಲೆ ಸಂಬಳ ನೀಡಲು ಪ್ರಾರಂಭಿಸಿದವು ಜೊತೆಯಲ್ಲಿಯೇ ಎಲ್ಲಾ ರಕ್ಷಣಾ ಪಡೆಗಳಿಂದ ಆಫ್ರಿಕಾದ ಜನರನ್ನು ಹೊರ ಹಾಕಲಾಯಿತು. ಇದು ಹೋರಾಟದ ಕಿಚ್ಚಿಗೆ ಮತ್ತಷ್ಟು ತುಪ್ಪ ಸುರಿಯಿತು.

1913 ರ ಭೂ ಕಾಯಿದೆ ಜಾರಿಗೆ ಬಂದಾಗ ಅದರ ರೀತಿ ಕೇವಲ ನಾಲ್ಕು ಲಕ್ಷ ಜನರು ಇಡೀ ಆಫ್ರಿಕಾದ 90% ಪ್ರದೇಶದ ಒಡೆಯರಾಗಿದ್ದರು. ಆದರೆ ಅದೇ 23 ಲಕ್ಷ ಆಫ್ರಿಕಾ ತಾಯ್ನೆಲದ ಪ್ರಜೆಗಳು ಉಳಿದ 9.9 ಪ್ರದೇಶವನ್ನು ತಮಗಾಗಿ ಪಡೆದಿದ್ದರು. ಎ.ಎನ್.ಸಿ. ಇದರ ಹೋರಾಟ ಸಂಘಟಿಸಲು ಪ್ರಾರಂಭಿಸಿತು. 1943 ರಲ್ಲಿ ನ್ಯಾಷನಲ್ ಕಾಂಗ್ರೆಸ್‌ನ ಯುವ ವೇದಿಕೆ ಸ್ಥಾಪನೆಯಾಯಿತು. ನೆಲ್ಸನ್ ಮಾಂಡೆಲಾ ಮುಂದಾಳತ್ವ ವಹಿಸಿದರು. ಬಿಳಿಯರ ದಬ್ಬಾಳಿಕೆಯ ವಿರುದ್ಧ ಹೋರಾಟ ಪ್ರಾರಂಭ. ಮಾಂಡೆಲಾ ಜೊತೆಯಲ್ಲಿ ಆಲಿವರ್ ಟಾಂಬೋ,ರೊತ್ ಫಸ್ಟ್, ಕ್ರಾಥೆಡಾ ಹುಟ್ಟಿಕೊಂಡರು. 1949 ರಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅಸಹಕಾರ ಮತ್ತು ಕಾನೂನನ್ನು ಕೈಗೆತ್ತಿಕೊಳ್ಳಲು ಯುವ ವೇದಿಕೆ ಸೂಚಿಸಿತು. 1950 ರಲ್ಲಿ ಇದರಿಂದಾಗಿ ಕಮ್ಯುನಿಸ್ಟ ಪಕ್ಷ ನಿಷೇಧಕ್ಕೊಳ್ಳಗಾಯಿತು. ಮೇ 1ರಂದು ಇದರ ವಿರುದ್ಧ ಬೃಹತ್ ಮೆರವಣಿಗೆ ಸಂಘಟಿಸಲಾಯಿತು. ಈ ಪ್ರದರ್ಶನದಲ್ಲಿ ನಡೆದ ಗೋಲೀಬಾರ್‌ನಿಂದ 18 ಜನ ಸತ್ತರು. ಹೋರಾಟಕ್ಕೆ ಮತ್ತಷ್ಟು ಜನ ಹುಟ್ಟಿಕೊಂಡಿರು.

ಎ.ಎನ್.ಸಿ. ಜೂನ್ 26 ರಂದು ರಾಷ್ಟ್ರೀಯ ದಿನ ಆಚರಿಸಲು ಕರೆ ನೀಡಿತು. ಎಲ್ಲಾ ಕೆಲಸಗಳೂ ಸ್ತಬ್ಧ ಮಾಡಲು ಕಾಂಗ್ರೆಸ್ ಕೊಟ್ಟ ಮೊದಲನೆಯ ಕರೆ. ಇದನ್ನೇ ಆಫ್ರಿಕಾ ದಿನನಾವನ್ನಾಗಿ ಆಚರಿಸಲಾಗುತ್ತಿದೆ. ಇದರ ಹಿಂದೆಯೇ ನಾಗರಿಕ ಅಸಹಕಾರು ಚಳುವಳಿ. ಈ ಚಳುವಳಿ ಒಡೆಯಲ. ಸರ್ಕಾರದ ಪ್ರಯತ್ನ. ಬಂಟೂಸ್ಥಾನ್—ಬುಡಕಟ್ಟುಗಳಿಗೆ ಪ್ರತ್ಯೇಕ ಪ್ರದೇಶ ನಿರ್ಮಾಣ. ಆದರೆ ಕಾಂಗ್ರೆಸ್ ಇವರನ್ನೆಲ್ಲಾ ಒಗ್ಗೂಡಿಸಿತು. 1955 ಮೂರು ಸಾವಿರ ಜನರ ಹೋರಾಟ ಜೋಹಾನ್ಸ್‌ಬರ್ಗ್‌ನಲ್ಲಿಸ್ವಾತಂತ್ರ್ಯದ ಗೊತ್ತುವಳಿ ಸ್ವೀಕಾರ ಆಫ್ರಿಕನ್ನರಿಗೆ ಸ್ವಾತಂತ್ರ್ಯ ನೀಡಿ ಕೂಗು ಆ ದಿನ ಮುಗಿಲು ಮುಟ್ಟಿತು. 156 ಜನ ಬಂಧಿತರಾದರು. 1960 ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಮೇಲೆ ಸರಕಾರದಕೆಂಗಣ್ಣು ಬಿತ್ತು. ಕಾಂಗ್ರೆಸ್‌ನ ನಿಷೇಧ. ಹೋರಾಟ ಗುಪ್ತವಾಗಿ ಅತಿ ತೀವ್ರವಾಯಿತು. ಪ್ರಿಟೋರಿಯಾ ಸರ್ಕಾರದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಇದು ಬುನಾದಿಯಾಯಿತು. ರಿವೋನಿಯಾ ಟ್ರಯಲ್‌ನಲ್ಲಿ ನೆಲ್ಸನ್ ಮಾಂಡೆಲಾ ಬಂಧಿಸಲ್ಪಟ್ಟರು. ಅಂದಿನಿಂದಲೂ ಹೋರಾಟದ ಕೂಗು ಮೊಳಗುತ್ತಲೇ ಇದೆ. ಮಾಂಡೆಲಾಗೆ ಭಾರತ ಸರ್ಕಾರ ನೆಹರೂ ಶಾಂತಿ ಪ್ರಶಸ್ತಿ ನೀಡಿದೆ. ಹಲವು ಸರ್ಕಾರಂ ಹಲವು ಮನ್ನಣೆ ನೀಡಿದೆ. ಮಾಂಡೆಲಾ ಜೇಲು ಗೋಡೆಯೊಳಗಿಂದಲೇ ಸ್ವಾಂತಂತ್ರ್ಯದ ಹಕ್ಕಿ ಹಾರಿಬಿಡುತ್ತಿದ್ದಾರೆ.ಕಪ್ಪುಖಂಡದ ಕೆಂಪು ಕೆಂಡ ಉರಿಯತ್ತಲೇ ಇದೆ.

1980 ರಿಂದ ಇತ್ತೀಚಿನವರೆಗೂ 2,300ಜನರು ಹೋರಾಟದಲ್ಲಿ ಮಡಿದಿದ್ದಾರೆ. ಕಳೆದ ವರ್ಷದಲ್ಲೇ ಸತ್ತವರು 1,300 ಮಂದಿ ಜನ ಹೋರಾಟದ ಬೆನ್ನು ಬಿಟ್ಟಿಲ್ಲ. ಈ ವರ್ಷ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ತನ್ನ ಹೋರಾಟದ 75 ನೇ ವರ್ಷವನ್ನು ಆಚರಿಸುತ್ತಿದೆ. ಹೋರಾಟದ ಉಸಿರು ಜೀವಂತವಾಗಿಟ್ಟುಕೊಂಡ ಸಾವಿರ ಸಾವಿರ ಜನ ನೆಲ್ಸನ್ ಮಾಂಡೆಲಾ ಬಿಡುಗಡೆ ಒತ್ತಾಯಿಸುತ್ತಿದ್ದಾರೆ. ಭಾರತದಲ್ಲೂ ಎಸ್. ಎಫ್. ಐ, ಡಿ. ವೈ. ಎಫ್. ಐ ಜಂಟಿ ಕಾರ್ಯಕ್ರಮ ಹಬ್ಬಿಕೊಂಡಿದೆ. ಆಫ್ರಿಕಾದ ನಿರಂತರ ಹೋರಾಟಕ್ಕೆ ಐಕ್ಯರಂಗದ ಕೆಂಪು ವಂದನೆಗಳು. ●

ನೆಲ್ಸನ್ ಮಾಂಡೆಲಾ

ಕಣ್ಣು ಬಿಟ್ಟರೆ ಸಾಕು ಜೇಲುಗೋಡೆಯ ಮೇಲೆ
ಅಲ್ಲಿಂದ ಈ ಕಡೆಗೆ ಇಲ್ಲಿಂದ ಆ ಕಡೆಗೆ
ಬಿಳಿಮುಖದ ಸೈನಿಕರ ಕಪ್ಪು ನೆರಳುಗಳು
ನೆರಳುಗಳ ನಡುವೆ ನೆರಳಾಗಿ ಕುಳಿತಿದ್ದಾನೆ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

ಹೊರ ಮುಗಿಲಲ್ಲಿ ಅದೋ ಹಕ್ಕಿಗಳು ಹಕ್ಕಿಗಳು
ಜೇಲುಗೋಡೆಯ ತುಂಬ ಹಕ್ಕಿಗಳ ನೆರಳುಗಳು
ಬಣ್ಣ ಬಣ್ಣದ ರೆಕ್ಕೆಗಳ ಕಪ್ಪು ನೆರಳುಗಳು
ನೆರಳ ಬೆನ್ನನ್ನೇರಿ ಬಾನು ಸುತ್ತಿದ್ದಾನೆ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

ಈ ಬಾನ ಕೆಳಗೇನೆ ಎಲ್ಲೋ ಹೊಲಗದ್ದೆಯಲಿ
ಕಾರಖಾನೆಗಳ ಕಪ್ಪು ಹೊಗೆ ಗಣಿಯಲ್ಲಿ
ಬಗ್ಗಿ ದುಡಿಯುವ ಕಪ್ಪು ದೇಹಗಳ ನೆರಳುಗಳು
ಕಪ್ಪು ಬೆವರಿಗೆ ಬೆರೆತು ಬೆವರಾಗಿ ಹರಿದಿದ್ದಾನೆ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

ಬೆಟ್ಟಗಳ ಬೆನ್ನಲ್ಲಿ ಬಂಡೆಗಳ ನೆರಳಲ್ಲಿ
ಅಡಗಿ ಬಿಳಿ ರಕ್ಕಸರ ನೀಲಿ ರಕ್ತಕ್ಕಾಗಿ
ಹೋರಾಡಿ ಕಪ್ಪು ನೆಲ ಕೆಂಪು ಮಾಡಿದ ಧೀರ
ಕಪ್ಪು ಬಾಂಧವರನ್ನು ಕನಸಾಗಿ ಕಾಡಿದ್ದಾನೆ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

ನಮಗುಂಟು ಮುಂಜಾವು ಮಧ್ಯಾಹ್ನ ಸಂಜೆಗಳು
ಊಟ ನಿದ್ದೆ ಟಿಫಿನ್ ವಾಕಿಂಗ್ ಸೆಮಿನಾರು
ಇಡಿ ಬದುಕೆ ಇರುಳಾಗಿ ಇರುಳೆ ಉಂಡಿದ್ದಾನೆ
ಕಪ್ಪು ಖಂಡದ ಕೆಂಪು ಕೆಂಡವಾಗಿದ್ದಾನೆ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

ತುಳಿಸಿಕೊಂಡವರೆಷ್ಟೋ ಕೆಂಡವಾದವರೆಷ್ಟೋ
ಸುಟ್ಟು ಹೋದವರೆಷ್ಟೋ ಬೂದಿ ಆದವರೆಷ್ಟೋ
ಹೋದವರ ಇದ್ದವರ ಬರುವವರ ತಿರುಗಣಿ
ಮಡುವಿಗೆ ಮಧ್ಯಬಿಂದುವಾಗಿದ್ದಾನೆ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

ಕಿಟ್‌ಕಿಟ್ ಮಿಲಿಟರಿ ಬೂಟುಗಳ ನಡುವೆ
ಗಡಿಯಾರ ಮುಳ್ಳುಗಳ ಟಿಕ್ ಟಿಕ್ ನಡುವೆ
ಕಪ್ಪು ಕೈ ಬಿಳಿಯ ಮೈ ಬೆಂಕಿ ಚಕಮಕಿ ನಡುವೆ
ಕಾಯುತ್ತಿದ್ದಾನೆ ಇವ ಕಾಯುತ್ತಿದ್ದಾನೆ ಇವ
ನೆಲ್ಸನ್ ಮಾಂಡೆಲಾ ನೆಲ್ಸನ್ ಮಾಂಡೆಲಾ

—ಚಂದ್ರಶೇಖರ ಪಾಟೀಲ

ಬಂದೂಕಿನ ಬಾಯಲ್ಲಿ ಪಾರಿವಾಳ

"ನಾನು ಈ ದೇಶದ ನಾಯಕನಾಗಿದ್ದರೆ ಇಡೀ ನ್ಯೂಟ್ರಾನ್ ಬಾಂಬುಗಳನ್ನು ಧ್ವಂಸಮಾಡುತ್ತಿದ್ದೆ. ಯುದ್ಧ ಟ್ಯಾಂಕುಗಳ ಯುದ್ಧ ವಿಮಾನಗಳನ್ನು ವಸ್ತು ಪ್ರದರ್ಶನದಲ್ಲಿಡುತ್ತಿದ್ದೆ. ಆಗ ನನ್ನ ದೇಶ ನೆಮ್ಮದಿಯಾಗಿ ಉಸಿರಾಡುತ್ತಿತ್ತು. ನಾನು ಶಾಂತಿಯ ಸಂತೋಷವನ್ನು ಎಲ್ಲರೊಡನೆ ಹಂಚಿಕೊಳ್ಳುತ್ತಿದ್ದೆ." ಇನ್ನೂ ಮೀಸೆ ಮೂಡದ ಬಾಲಕನ ಹೃದಯದಾಳದಿಂದ ನೂರು ಶಾಂತಿಯ ಮಾತುಗಳು ಹೊರಹೊಮ್ಮುತ್ತಿದ್ದವು. "ಅಮ್ಮಾ, ಅಮ್ಮಾ, ಗೋರ್ಬಚೇವ್ ಹೆಸರನ್ನು ಬರೆಯುವುದು ಹೇಗೆ" ಮತ್ತೊಂದು ಧ್ವನಿ.

ಲೀಫ್‌ಸಿಗ್‌ನಲ್ಲಿ ನಡೆದ 29 ನೆಯ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ದೂರದ ಬೆಳ್ಳಿ ತೆರೆಯ ಮೇಲೆ ಹಲವು ಮಾತುಗಳು ಎಲ್ಲರ ಎದೆಯ ಭಾವನೆಗಳನ್ನು ಕಲಕುವಂತೆ ಮೊಳಗುತ್ತಿದ್ದವು. ಬೆಳ್ಳಿ ಪರದೆ ನಮಗೆ ಕೈಗೆಟುಕದಿದ್ದರೂ ಬೆಳ್ಳಿ ಪರದೆಯ ಮೇಲೆ ಮೂಡುತ್ತಿದ್ದ ಮಾತುಗಳು ನಮ್ಮ ಕೈಯಳತೆಯಲ್ಲೇ ಇತ್ತು. ಹೌದು ! ಯುದ್ಧ ಬಾಂಬುಗಳಿಗೆ, ವಿಮಾನಗಳಿಗೆ ಅಣ್ವಸ್ತ್ರಗಳಿಗೆ ಬೀಗ ಜಡಿಯಲಿ ಸಾಧ್ಯವಿಲ್ಲವೆ ? ತೆರೆಯತ್ತ ಕಣ್ಣುಗಿ ಕುಳಿತಿದ್ದ ಪ್ರೇಕ್ಷಕರನ್ನು ಪ್ರಶ್ನಿಸಿಕೊಳ್ಳುವಂತೆ ಮಾಡಿತ್ತು.

ಭಾರತದಲ್ಲಿಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ನಡೆಯುತ್ತಿದೆ. ಲೀಫಾ ಸಾಗ್‌ನಲ್ಲಿ ಶಾಂತಿಗೇ ಮೀಸಲಾದ ಚಿತ್ರೋತ್ಸವದಲ್ಲಿ 60 ದೇಶಗಳಿಂದ 700 ಚಿತ್ರಗಳು ಭಾಗವಹಿಸಿದ್ದವು. ಶಾಂತಿ ವಸ್ತು ಪ್ರದರ್ಶನ, ವಿಡಿಯೋ ಪ್ರದರ್ಶನ, ಶಾಂತಿ ಸಂಕೀರಣಗಳನ್ನು ಇದೇ ಆರು ದಿನಗಳ ಕಾಲ ಹಮ್ಮಿಕೊಳ್ಳಲಾಗಿತ್ತು. ಆಫ್ರಿಕಾದ ಕಪ್ಪು ಜನರ ಧೀರ ಹೋರಾಟ, ಚಿಲಿ, ಕ್ಯೂಬ, ನಮೀಬಿಯಾ, ನಿಕರಾಗುವ ಹೀಗೆ ಶಾಂತಿಗಾಗಿ ಒದ್ದಾಡುತ್ತಿರುವ ಕೆಂಡಗಳೆಲ್ಲಾಈಚಿತ್ರೋತ್ಸವದಲ್ಲಿತಮ್ಮ ದುಃಖ ದುಮ್ಮಾನಗಳನ್ನೆಲ್ಲಾ ಬೆಳ್ಳಿ ಪರದೆಯ ಮೇಲೆ ಮೂಡಿಸುತ್ತಾ ಶಾಂತಿ ಸ್ಥಾಪನೆಗೆ ಹೋರಾಡುವ ಹುಮ್ಮಸ್ಸನ್ನು ಹುಟ್ಟುಹಾಕುತ್ತಿದ್ದವು.

ಬಿಕ್ಕಳಿಕೆ, ನೋವಿನ ಧ್ವನಿ, ಬಾಂಬರ್‌ಗಳ ಹಾರಾಟ, ಉಸಿರು ಸ್ಥಗಿತ, ದಿಕ್ಕಾಪಾಲಾದ ಕಂದಮ್ಮಗಳು ಎಲ್ಲಾ ಚಿತ್ರಗಳ ಮೂಲ ಉಸಿರಾಗಿದ್ದವು. ಪ್ರೇಕ್ಷಕರ ನೋವಿನ ಉದ್ಗಾರ, ಸ್ತಬ್ಧವಾಗುತ್ತಿದ್ದ ಉಸಿರುಗಳೇ ಬಹುಮಾನ ಪಡೆಯುವ ಚಿತ್ರಗಳನ್ನು ಹೆಸರಿಸಿಬಿಡುತ್ತಿತ್ತು.

ಪಶ್ಚಿಮ ಜರ್ಮನಿಯ ನಿರಾಶ್ರಿತ ಕೆಲಸಗಾರರ ಮೇಲಿನ ದಬ್ಬಾಳಿಕೆ ಅವರ ನೋವುಗಳನ್ನು ಒಳಗೊಂಡ "ಅಟ್ ದಿ ವೆರಿ ಬಾಟಮ್" ಚಿತ್ರವಿಶೇಷ ಪ್ರಶಸ್ತಿ ಗಳಿಸಿತು. ಜನರಲ್ ದನೋಚಿಟ್ ಅಧಿಕಾರಕ್ಕೆ ಬಂದನಂತರ ನಿಷೇಧಕ್ಕೊಳಗಾದ "ಲೈಕ್ಸ್ ಜನರಲ್ ಡೆ ಚಿಲಿ" ಚಿತ್ರ ಸ್ಪರ್ಧೆಯ ಬೆಳ್ಳಿ ಪಾರಿವಾಳ ಪ್ರಶಸ್ತಿ ಪಡೆಯಿತು. ಜಿ.ಡಿ.ಆರ್.ನ 'ಜನರಲ್ಸ್' ರಷ್ಯಾದ "ಟ್ರಂಪೆಟ್ ಸೋಲೋ" ಪ್ರಶಸ್ತಿಗಳಿಸಿದ ಇತರ ಚಿತ್ರಗಳು.

(2ನೇ ಪುಟದಿಂದ)

ಬಂಡವಾಳಶಾಹಿ ವಾದಕ್ಕೆ ಪ್ರಚೋದನೆ ನೀಡುತ್ತವೆ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಿದೆ. ಆದರೂ ಹೆದರದೆ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರೋಣ ಎಂಬ ಮಾತನ್ನು ನೆನಪಿಸಿಕೊಳ್ಳೋಣ. ಹಾಗೂ ಚೀನಾದ ಡೆಂಗ್ ಜಿಯಾವೊ ಪಿಂಗ್‌ರವರು ಅಲ್ಲಿ ಆರ್ಥಿಕ ಸುಧಾರಣೆಗಳನ್ನು ಘೋಷಿಸುವಾಗ, ಶುದ್ಧವಾದ ಗಾಳಿ ಬರಲೆಂದು ನಮ್ಮ ಮನೆಯ ಕಿಟಕಿಯನ್ನು ತೆರೆದರೆ ಅದರ ಜೊತೆಯಲ್ಲಿಯೇ ಕೆಲವು ಮಟ್ಟಿಗೆ ದುರ್ಗಂಧ ಸೊಳ್ಳೆಗಳು ಬರುವುದು ಸಹಜವ.

ಇವುಗಳ ವಿರುದ್ಧ ಸರಿಯಾದ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಕಿಟಕಿಯನ್ನು ಮುಚ್ಚುವುದು ಇದಕ್ಕೆ ಪರಿಹಾರವಲ್ಲ ಎಂದಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಈಗ ಚೀನಾ ಕಮ್ಯುನಿಸ್ಟ್ ಪಕ್ಷ ತೆಗೆದುಕೊಂಡಿರುವ ಕ್ರಮಗಳು ಈ ಕ್ರಾಂತಿಕಾರಿ ಎಚ್ಚರಕ್ಕೆ ಸಾಕ್ಷಿಗಳಷ್ಟೇ.

ಚೀನಾ ವಿದ್ಯಾರ್ಥಿ ಮತಪ್ರದರ್ಶನ

ನಡೆದುದೇನು ?

ಶಾಂಘೈಯ ಜನತಾ ಪೌಸರಕಾರದ ವಕ್ತಾರರ ಹೇಳಿಕೆ: "ಜಿಯಾಟೋಂಗ್ ವಿಶ್ವವಿದ್ಯಾಲಯದ ಆವರಣದಲ್ಲಿ ಡಿ. 16ರಂದು ಪೋಸ್ಟರ್‌ಗಳು ಪ್ರಥಮ ಬಾರಿ ಕಾಣಿಸಿಕೊಂಡವು, ಮುಂದಿನ 5 ದಿನಗಳಲ್ಲಿ ಟೋಂಗ್‌ಜೀ ಮತ್ತು ಫೂಡನ್ ವಿಶ್ವವಿದ್ಯಾಲಯಗಳಲ್ಲಿ ಅವು ಕಾಣಿಸಿದವು. ಇವುಗಳ ಕೆಲವು ಪೋಸ್ಟರಗಳಲ್ಲಿ, ಶಿಕ್ಷಣದ ಕಾರ್ಯಕ್ರಮ, ವಿದ್ಯಾರ್ಥಿಗಳ ಜೀವನ ಪರಿಸ್ಥಿತಿ ಮತ್ತು ವಿದ್ಯಾರ್ಥಿ ಸಂಘಟನೆಗಳ ಕಾರ್ಯಗಳಿಗೆ ಸಂಬಂಧಿಸಿದ್ದುವು. ಸಮತಾವಾದಿ ಪ್ರಜಾಪ್ರಭುತ್ವವನ್ನು ತ್ವರೆಪಡಿಸುವ. ರಾಜಕೀಯ ಪದ್ಧತಿಯನ್ನು ಸುಧಾರಿಸುವ ಅಂಶಗಳೂ ಕೆಲವು ಪೋಸ್ಟರ್‌ಗಳಲ್ಲಿ. ಆ ಅವಕಾಶವನ್ನು ಪಯೋಗಿಸಿ ಕೆಲವು ಸಂದರ್ಭಸಾಧಕರು ಪ್ರತಿಗಾಮಿ ಅಂಶಗಳಿರುವ' ನಾಲ್ಕು ಮೂಲಭೂತ ತತ್ವಗಳನ್ನು ಅಂದರೆ ಪಕ್ಷದ ಮುಖಂಡತ್ವ, ಸಮತಾವಾದಿ ಮಾರ್ಗ, ಜನತಾ ಪ್ರಜಾಪ್ರಭುತ್ವ ಸರ್ವಾಧಿಕಾರ ಮತ್ತು ಮಾರ್ಕ್ಸ್‌ವಾದ- ಲೆನಿನ್‌ವಾದ ಮಾವೊತ್ಸೆತುಂಗ್' ಸಿದ್ಧಾಂತ-ವಿರೋಧಿಸುವ ಪೋಸ್ಟರುಗಳನ್ನೂ ಹಚ್ಚಿದ್ದರು.

ನಗರದಲ್ಲಿ ವಿದ್ಯಾರ್ಥಿಗಳ ಮತ ಪ್ರದರ್ಶನಗಳು ನಡೆದವು. ಕೆಲವು ಭಾಗದಲ್ಲಿ ವಾಹನವನ್ನು ಅಡ್ಡಿಪಡಿಸುವ ಪ್ರಯತ್ನವೂ ನಡೆಯಿತು. "ಬಹಳಷ್ಟು ವಿದ್ಯಾರ್ಥಿಗಳು ಒಳ್ಳೆ ಭಾವನೆ ಹೊಂದಿದ್ದರೂ ಕೂಡ ಅವರ ಕೃತಿಗಳುಗಳು ಸರಿಯಾದವುಗಳಲ್ಲ" ಎಂದು ಆ ವಕ್ತಾರರ ಅಭಿಪ್ರಾಯ.

ಸಭೆ ಸೇರುವುದು, ಮೆರವಣಿಗೆ ತೆಗೆಯುವುದು, ಮತಪ್ರದರ್ಶನ ಮಾಡುವುದು ಸಂವಿಧಾನಾತ್ಮಕ ಹಕ್ಕಾಗಿದ್ದರೂ ಕೂಡ ಆ ವಕಾರರ ಪ್ರಕಾರ "ಕೆಲವು ವಿದ್ಯಾರ್ಥಿಗಳಿಗೆ ರಾಷ್ಟ್ರದ ಸುಧಾರಣೆಯ ಕುರಿತು ಸರಿಯಾದ ತಿಳುವಳಿಕೆಯಿಲ್ಲದಾಗಿದೆ. ನಾಗರೀಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಯಾವ ರೀತಿ ಸರಿಯಾಗಿ ಉಪಯೋಗಿಸಬೇಕೆಂಬುದರ ಬಗ್ಗೆ ಅವರಿಗೆ ಬರೇ ಅಸ್ಪಷ್ಟ ತಿಳುವಳಿಕೆ ಇತ್ತು"

ಪೀಪಲ್ಸ್ ಡೈಲಿಯಲ್ಲಿ

ಹಲವಾರು ಪ್ರದೇಶಗಳಲ್ಲಿ ನಡೆದ ವಿದ್ಯಾರ್ಥಿ ಮತ ಪ್ರದರ್ಶನಗಳ ಕುರಿತು ಡಿ. 25ರ "ಪೀಪಲ್ಸ್ ಡೈಲಿ"ಯ ಮುಖಪುಟದಲ್ಲಿ ಪ್ರಕಟವಾದ ಲೇಖನದಲ್ಲಿ ಒಬ್ಬ ಟೀಕಾಕಾರ "ರಾಜಕೀಯ ಸುಧಾರಣೆ ಆಗಬೇಕೆಂದು ಅಪೇಕ್ಷಿಸುವ ಯುವ ವಿದ್ಯಾರ್ಥಿಗಳನ್ನೊಳಗೊಂಡು ಯಾವುದೇ ವ್ಯಕ್ತಿ ಗಲಭೆಗೆ ಅವಕಾಶ ಮಾಡಿಕೊಡಲಾರ. ಎಷ್ಟು ಸುಂದರವಾಗಿ ಕಂಡರೂ ಕೂಡ "ಸಂಪೂರ್ಣ ಪ್ರಜಾಪ್ರಭುತ್ವ" ದಂಥ ಘೋಷಣೆಗಳು ಪುನರಾವರ್ತಗೊಂಡು ಅಪಾಯ ಉಂಟಾಗುವ ಅವಕಾಶ ಒದಗಿಸಬಾರದು." ಯಾರಾದರೂ ಪರಿಸ್ಥಿತಿಯನ್ನು ತಪ್ಪಾಗಿ ತಿಳಿದುಕೊಂಡರೆ, ಪಕ್ಷದ ಮುಖಂಡತ್ವದ ವಿರುದ್ಧ ಜನರು ಬಂಡೇಳುವಂತೆ ಮಾಡಿದರೆ, ಮತ್ತು ಸಮತಾವಾದದ ಗುರಿಯಿಂದ ಅಡ್ಡದಾರಿ ಹಿಡಿದರೆ, ಸುಧಾರಣೆಯ ಪ್ರಗತಿಗೆ ಅಡ್ಡಿಮಾಡಿದರೆ, ಉತ್ಪಾದನೆ ಮತ್ತು ನಿರ್ಮಾಣಕ್ಕೆ ತಡೆ ಉಂಟುಮಾಡಿದರೆ, ಅಂಥವರು ಗೆದಿಯಲು ಸಾಧ್ಯವಿಲ್ಲ. ಕೊನೆಗೆ ಕಹಿ ಫಲವನ್ನಷ್ಟೇ ತಿಂದಾನು ಎಂದಿದೆ ಆ ಲೇಖನ. "ರಾಜಕೀಯ ಸುಧಾರಣೆ" ಸಮತಾವಾದಿ ಪದ್ಧತಿಯ ಪರಿಪೂರ್ಣತೆಯ ಪ್ರಕ್ರಿಯೆ ಅದನ್ನು ಪಕ್ಷದ ಮುಖಂಡತ್ವದಲ್ಲಿ ನಡೆಸಬೇಕಾಗಿದೆ." ಎಂದು ಲೇಖನ ಒತ್ತಿ ಹೇಳಿದೆ.

ಮಂಡಲ್ ಪಂಚಾಯಿತಿ ಚುನಾವಣೆ

(1ನೇ ಪುಟದಿಂದ)

ವಿರೋಧ ಪಕ್ಷಗಳ ಮುಖ್ಯವಾಗಿ ಎಡ ಪಕ್ಷಗಳ ಸ್ಪರ್ಧಿಗಳನ್ನು ಎಲ್ಲಾ ರೀತಿಗಳಲ್ಲಿ ನಿಲ್ಲದಂತೆ ಮಾಡಲು ಪ್ರಯತ್ನಗಳನ್ನು ಮಾಡಲಾಗಿತ್ತು. ಪರಿಣಾಮವಾಗಿ,ಅವಿರೋಧ ಆಯ್ಕೆ ಎಷ್ಟು ದೊಡ್ಡ ಸಂಖ್ಯೆಯಲ್ಲಿ ಸಾಧ್ಯವಾಯಿತು

ಜನತಾ ಮತ್ತು ಕಾಂಗ್ರೆಸ್ ಪಕ್ಷಗಳ "ತಮ್ಮ ಪಕ್ಷಗಳಲ್ಲದೆ ಇತರರಿಗೆ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ಮಾಡಲು ಕೂಡ ಬಿಡಲಿಲ್ಲ" ಗ್ರಾಮಗಳ ಅಯಕಟ್ಟಿನ ಜಾಗಗಳಲ್ಲಿ ಗೂಂಡಾಪಡೆಗಳನ್ನು ನಿಲ್ಲಿಸಿ ಈ ಕೆಲಸವನ್ನು ಬಹಳ ಜಾಗ್ರತೆಯಾಗಿ ಮಾಡಲಾಗಿತ್ತು.

"ನಮಗಲ್ಲದೆ ಇತರರಿಗೆ ಮತಗಳನ್ನಿತ್ತರೆ ಜೋಕೆ, ನಿಮ್ಮನ್ನೂ, ಏನು ಮಾಡುತ್ತೇವೆ ಎಂದು ನೋಡಿ !" ಎಂಬ ಬೆದರಿಕೆ ಸಾಮಾನ್ಯ ಜನತೆಯ ಮೇಲೆ ಎಲ್ಲಾ ಕಡೆಗಳಲ್ಲಿ ಇತ್ತು.

ಚುನಾವಣೆಯ ದಿನ ಆ ಬೆದರಿಕೆಯಂತೆ ಅವರು ನಡೆದೂ ನಡೆದರು. ಹೆಚ್ಚಿನೆಡೆ "ರಿಗ್ಗಿಂಗ್" ನಡೆದಿದೆ.

ಆದರೂ ಫಲಿತಾಂಶಗಳು ರಾಜ್ಯದಲ್ಲಿ ಮಂಡಲ್ ಪಂಚಯತ್‌ಗಳಲ್ಲೂ ಸ್ಥಾಪಿತಹಿತಾಸಕ್ತಿಗಳು ಕಾಂಗ್ರೆಸ್ಸು (ಐ) ಮತ್ತು ಜನತಾ ಎಂದು ವಿಭಜಿಸಿಕೊಂಡು ಅಧಿಕಾರ ಪಡೆದಿದೆ ಎಂಬುದನ್ನು ಸಾಬೀತು ಮಾಡಿದೆ.

ಯಾರೂ ಈ ಚುನಾವಣೆಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ "ಸ್ಥಾಪಿತ ಹಿತಾಸಕ್ತಿಗಳ ಆಡಳಿತೆ ಕೊನೆಗೊಂಡ, ಜನಸಾಮಾನ್ಯರ ಸಮೀಪದ ಪ್ರಾದೇಶಿಕ ಆಡಳಿತೆ ಏರ್ಪಾಡಾಗುವಂತಾಗಿದೆ" ಎಂದು ಹೇಳಲು ಸಾಧ್ಯವಿಲ್ಲ.

ಬಡ ಬೋರೆಗೌಡ ಮಾತ್ರ ಹಿಂದಿನಂತೆ ಆಡಳಿತದ ಆಗುಹೋಗುಗಳಲ್ಲಿ ಏನೇನೂ ಪಾತ್ರವಿಲ್ಲದಂತಾಗಿದ್ದಾನೆ, ಎಂಬುದನ್ನು ಈ ಫಲಿತಾಂಶದ್ದು ಸಾರುತ್ತದೆ.

ಈ ಚುನಾವಣೆಗಳಿಂದ "ನಾವು ಅದ್ಭುತ ಸಾಧಿಸಿದ್ದೇವೆ"ಎಂದು ತೋರಿಸಲು ಇದೀಗ ಜನತಾದ ಸರಕಾರವು ಇದೇ 31 ರಂದು ಬೆಂಗಳೂರಿನಲ್ಲಿ "ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ಗೆದ್ದವರಿಗೆ ಭಾರಿ ಭೋಜನ ಏರ್ಪಡಿಸುತ್ತಿರುವುದನ್ನು" ನಾವು ಖಂಡಿತವಾಗಿ ಸ್ವಾಗತಿಸುವುದಿಲ್ಲ.

ನಿಜವಾಗಿ ಹೊಸ ವಾತಾವರಣವನ್ನು ಸೃಷ್ಟಿಸಿದ್ದರೆ ಅಂತಹ ಘಟನೆಯನ್ನು ಕೊಂಡಾಡುವುದು ಅವಕಾಶ್ಯವಿಲ್ಲವೆಂದು ನಾವು ಹೇಳುತ್ತಿರಲಿಲ್ಲ. ಅಂತಹ ವಾತಾವರಣ ಬದಲಾವಣೆ ಇಲ್ಲವಾದುದರಿಂದ ನಾವು ಈ ಆಚರಣೆಯನ್ನು ಲಕ್ಷಗಟ್ಟಲೆ ಹಣ ವೆಚ್ಚ ಮಾಡುವ ಆಚರಣೆಯನ್ನು ಸ್ವಾಗತಿಸುವುದಿಲ್ಲ.

ಮಾರ್ಕ್ಸ್‌ವಾದಿ ಪಕ್ಷವು ಮಂಡಲ ಪಂಚಾಯತ್ ಚುನಾವಣೆಗಳನ್ನು ಸುಮಾರು 1,200 ಸ್ಥಾದಗಳಲ್ಲಿ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. (ಪಕ್ಷದ ಚಿಹ್ನೆಯ, ಸ್ವತಂತ್ರ ಚಿಹ್ನೆಯಲ್ಲೂ)

ಇವುಗಳಲ್ಲಿ ಸುಮಾರು 120ಸ್ಥಾನಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದಾರೆ. ಎಂಬ ವರದಿ ಇದೆ. (ವಿವರ ಮುಂದಿನ ವಾರ)

ಮಾರ್ಕ್ಸ್‌ವಾದಿ ಪಕ್ಷಕ್ಕೆ ಈ ಚುನಾವಣೆಗಳಿಂದ ಹಲವಾರು ಪಾಠಗಳನ್ನೂ ಕಲಿಯಲಿಕ್ಕಿದೆ. ಆ ದಿಕ್ಕಿನಲ್ಲಿ ಪೂರ್ತಿ ವರದಿಗಳ ಆಧಾರದಲ್ಲಿ ಚುನಾವಣೆಗಳನ್ನು ವಿಮರ್ಶಿಸಿ ಈ ಪಾಠಗಳನ್ನು ತಿಳಿದುಕೊಳ್ಳಲು ಪಕ್ಷವು ಮುಂದಾಗಬೇಕು.

ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವ ದಿಕ್ಕಿನಲ್ಲಿ ಕೆಲಸಮಾಡಲು ನಾವು ಯಾವುದೇ ಪ್ರಜಾಪ್ರಭುತ್ವವಾದಿ ಪಕ್ಷದ ವಕ್ತಾರರಿಗೆ ಪಂಚಾಯತ್ ಪ್ರತಿನಿಧಿಗಳಿಗೆ ಬೆಂಬಲವೀಯುತ್ತೇವೆ. ●

(6ನೇ ಪುಟದಿಂದ)

ಸಮಸ್ಯೆಗಳನ್ನು ಪ್ರತಿ ಹಳ್ಳಿಯಲ್ಲೂ ಕಾಣುತ್ತಿದ್ದೆವು.

ಈ ಕ್ಷೇತ್ರದಲ್ಲಿ ರೈತ ಸಂಘದ ವತಿಯಿಂದ ಹಲವಾರು ಹೋರಾಟಗಳನ್ನು ನಡೆಸಿದ್ದರೂ ಸಹ ಚುನಾವಣೆಯಲ್ಲಿ ಸ್ಪರ್ಧಿಸಿರುವುದರಿಂದ ಹಳ್ಳಿಗಳಿಗೆ ಹೊಸದಾಗಿ ಕಾಣುತ್ತಿತ್ತು. ಈ ಕ್ಷೇತ್ರದಲ್ಲಿ ಹಿಂದಿನ 1983 ಮತ್ತು 1985 ಚುನಾವಣೆಯಲ್ಲಿ ಜನತಾಗೆ ಬೆಂಬಲ ಮಾಡಿದ್ದರಿಂದ ಈವರೆಗೆ ನಮ್ಮನ್ನು ಜನ ಜನತಾ ಎಂದು ತಿಳಿದಿದ್ದರು. ಈಗ ಕಮ್ಯುನಿಸ್ಟ್ ಪಕ್ಷವಂತ ಕೇಳಲು ಹೋದಾಗ ಕೆಲವೆಡೆ ಆಶ್ಚರ್ಯವಾಗುತ್ತಿದ್ದನ್ನು ಕಂಡೆವು ನಾವು ಭಾಷಣ ಮಾಡುವಾಗ ಪಕ್ಷದ ನಿಲುವನ್ನು ಹೇಳುವುದರೊಟ್ಟಿಗೆ ಆ ಹಳ್ಳಿಹಳ್ಳಿಗಳಲ್ಲಿ ರೈತ ಸಂಘವನ್ನು ಕಟ್ಟಿ ರೈತರ ದಿನ ನಿತ್ಯದ ಸಮಸ್ಯೆಗಳಿಗೆ ಒಂದಾಗಿ ಹೋರಾಟ ಮಾಡಬೇಕೆಂದು ಒತ್ತು ಕೊಟ್ಟು ಹೇಳುತ್ತಿದ್ದೆವು. ನಮಗೆ ಹಳ್ಳಿಗರಿಂದ ಉತ್ತಮ ಪ್ರತಿಕ್ರಿಯೆ ಬರುವುದನ್ನು ಗಮನಿಸಿದೆವು. ಆ ಪ್ರತಿಕ್ರಿಯೆಯ ಫಲವನ್ನು ನಮ್ಮ ರೈತ ಸಂಘವನ್ನು ಕಟ್ಟುವುದರ ಮೂಲಕ ಪಡೆಯಬೇಕಾಗಿದೆ.

ಜನತಾ, ಪಕ್ಷವು ಉತ್ತರ ಪ್ರದೇಶಗಳಲ್ಲಿ ಕಾಂಗ್ರೆ ಪಕ್ಷ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಜನತಾಗೆ ಬಾಡಿಗೆ ಜನರಾಗಿ ದುಡಿದ ನಮ್ಮ ಮಿತ್ರರ ಅಭಿಪ್ರಾಯದಂತೆ ನಮ್ಮ ಪಕ್ಷಕ್ಕೆ ಇಷ್ಟು ರಿಗ್ಗಿಂಗೆ ನಡೆಸಿದರೂ 600 ಮತಗಳು ಹೇಗೆ ಬಂದವೆಂದು ಯೋಚಿಸುತ್ತಿದ್ದಾರಂತೆ.

ಅಶ್ಲೀಲ ನಾಟಕದ ವಿರುದ್ಧ ಹೋರಾಟ

ರಾಯಚೂರು ಜಿಲ್ಲೆಯ ಅಖಿಲ ಭಾರತ ಮಹಿಳಾ ಸಂಘಟನೆಯ ಘಟಕ "ಜಾರಿ ಬಿದ್ದರೂ ಜಾರಿಣಿಯಲ್ಲ, ಅರ್ಥಾತ್ ಅಂಗನವಾಡಿ ಟೀಚರ್" ಎಂಬ ನಾಟಕವೊಂದನ್ನು ಅಭಿನಯಿಸುವುದರ ವಿರುದ್ಧ ಪ್ರತಿಭಟಿಸಿ ನಾಟಕದ ಅಭಿನಯವನ್ನು ತಡೆಹಿಡಿಯುವುದರಲ್ಲಿ ಯಶಸ್ವಿಯಾಗಿದೆ. ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಲ್ಲಿ ನಾಟಕ ತಂಡವೊಂದು ಜಿಲ್ಲಾದ್ಯಂತ ಸಂಚರಿಸಿ ಹಣ ಮಾಡುವ ಉದ್ದೇಶದಿಂದ ಕೀಳು ಕಾಮನೆಗಳಿಗೆ, ಸಂಸ್ಕೃತಿಗೆ ಅನುವಾಗುವ ನಾಟಕವೊಂದನ್ನು ಸಜ್ಜುಗೊಳಿಸಿತ್ತು.

ಈ ನಾಟಕವನ್ನು ಅಭಿನಯಿಸುವುದರ ವಿರುದ್ಧ ಅಬಾ ಪ್ರಮಸಂನ ರಾಯಚೂರು ಘಟಕದ ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟಿಸಿ ಜಿಲ್ಲಾಧಿಕಾರಿಗಳಿಗೆ ಈ ನಾಟಕದ ಮೇಲೆ ನಿಷೇಧ ಹೇರಲು ಒತ್ತಾಯಿಸಿದರು, ಈ ನಾಟಕವನ್ನು ರಾಯಚೂರು ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳು ನಿಷೇಧಿಸಿದರು. ●

ಈ ವಾರ....

ಜಗತ್ತಿನಲ್ಲಿ

- ● ಆಫ್‌ಘಾನಿಸ್ತಾನದಲ್ಲಿ ಜ. 15ರಿಂದ ಏಕಪಕ್ಷೀಯ ಕದನ ವಿರಾಮ ಜಾರಿಗೆ
- ○ ಚೀನಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ರಾಜೀನಾಮೆ- ಪಕ್ಷದ ನಿಯಮಗಳನ್ನು ಮುರಿದುದರ ಬಗ್ಗೆ ಸ್ವಯಂ ಟೀಕೆ
- ● ಯೂರೋಪಿನಲ್ಲಿ ಭೀಕರ ಚಳಿಗಾಲ—347 ಸಾವು
- ● ಕಳೆದ 26 ವರ್ಷಗಳಲ್ಲಿ ಅತ್ಯಂತ ಕಡಿಮೆ 1986 ರಲ್ಲಿ ಅಣ್ವಸ್ತ್ರ ಪರೀಕ್ಷೆ-ಕಾರಣ ಸೋವಿಯೆತ್ ಅಣ್ವಸ್ತ್ರ ನಿಷೇಧ

ದೇಶದಲ್ಲಿ

- ● ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಯಶಸ್ವಿ ಮುಷ್ಕರ ಜ. 21
- ○ ಎಸ್. ಜಿ. ಪಿ. ಸಿ. ಸಮುಚ್ಚಯದಲ್ಲಿ ಪೋಲೀಸ್ ಕಾರ್ಯಾಚರಣೆ-78 ಜನರ ಬಂಧನ
- ● ಗಡಿಯಲ್ಲಿ ಪಾಕ್ ಸೇನಾ ಜಮಾವಣೆ
- ○ ವಿದ್ಯುತ್ ಉತ್ಪಾದನೆಗೆ ಖಾಸಗಿ ಬಂಡವಾಳದ ಯೋಜನೆ ವಿಫಲ ಪ್ರಧಾನಿ ವಿಷಾದ
- ● ಮುಷ್ಕರ ಅಸಾಧ್ಯ ಮಾಡಲು ಶೀಘ್ರವೇ ಕಾನೂನು ಕೇಂದ್ರ ಕಾರ್ಮಿಕ ಮಂತ್ರಿ

ರಾಜ್ಯದಲ್ಲಿ

- ○ ನಗರ ಆಸ್ತಿ ತೆರಿಗೆ ವಸ್ತುನಿಷ್ಠ ಸೂತ್ರಕ್ಕೆ ನಾಗರಿಕ ಸಭೆ ಆಗ್ರಹ
- ○ ಮಂಡಲ ಪಂಚಾಯಿತಿ- ಬಿರುಸಿನ (ಶೇಕಡಾ 70) ಮತದಾನ ಹಲವು ಕಡೆ ಗುಂಪು ಘರ್ಷಣೆ.

Printed & Published by P. Ramachandra Rao on behalf of the Communist Party of India [Marxist] Karnataka State Committee,
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331
Editor P. Ramachandra Rao
Managing Editor : N. K. Upadhadyay